# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **962**
ಸದಸ್ಯರ ಹೆಸರು : **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
ಉತ್ತರಿಸುವ ದಿನಾಂಕ : **24.02.2023**
ಉತ್ತರಿಸುವ ಸಚಿವರು : **ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ವಾರ್ಷಿಕವಾಗಿ ಸ್ಥಳೀಯ ಪ್ರದೇಶಾಭಿವೃದ್ಧಿಗಾಗಿ ನೀಡುವ ಅನುದಾನ ಎಷ್ಟು; ಅವು ಯಾವುವು; ಅವುಗಳಲ್ಲಿ ಎಷ್ಟು ಅನುದಾನ ಬಳಕೆಯಾಗಿದೆ; (ಕಳೆದ ಮೂರು ವರ್ಷಗಳ ವಿವರ ನೀಡುವುದು) | ರಾಜ್ಯದಲ್ಲಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ವಾರ್ಷಿಕವಾಗಿ ಸ್ಥಳೀಯ ಪ್ರದೇಶಾಭಿವೃದ್ಧಿಗಾಗಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರತಿ ಕ್ಷೇತ್ರಕ್ಕೆ ಬಂಡವಾಳ ವೆಚ್ಚ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ-ಗಳಡಿ ವಾರ್ಷಿಕ ಒಟ್ಟು ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಲಾಗುತ್ತದೆ.<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಎಲ್ಲಾ ವಿಧಾನ ಸಭಾ ಸದಸ್ಯರಿಗೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಕೆಳಕಂಡಂತೆ ಅನುದಾನವು ಬಳಕೆಯಾಗಿರುತ್ತದೆ. |

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ಯೋಜನೆ | ಬಿಡುಗಡೆ ಮಾಡಿರುವ ಅನುದಾನ | ಬಳಕೆ ಯಾಗಿರುವ ಅನುದಾನ ** |
|---|---|---|---|---|
| 1 | 2020-21 * | ಬಂಡವಾಳ ವೆಚ್ಚ | 443.14 | 176.81 |
| | | ವಿಶೇಷ ಘಟಕ ಯೋಜನೆ | 109.27 | 31.59 |
| | | ಗಿರಿಜನ ಉಪ ಯೋಜನೆ | 44.59 | 11.87 |
| | | **ಒಟ್ಟು** | **597.00** | **220.27** |
| 2 | 2021-22 | ಬಂಡವಾಳ ವೆಚ್ಚ | 445.00 | 287.05 |
| | | ವಿಶೇಷ ಘಟಕ ಯೋಜನೆ | 110.00 | 53.28 |
| | | ಗಿರಿಜನ ಉಪ ಯೋಜನೆ | 45.00 | 21.52 |
| | | **ಒಟ್ಟು** | **600.00** | **361.85** |
| 3 | 2022-23 | ಬಂಡವಾಳ ವೆಚ್ಚ | 442.59 | 145.15 |
| | | ವಿಶೇಷ ಘಟಕ ಯೋಜನೆ | 109.09 | 36.12 |
| | | ಗಿರಿಜನ ಉಪ ಯೋಜನೆ | 44.32 | 12.77 |
| | | **ಒಟ್ಟು** | **596.00** | **194.04** |
| **ಒಟ್ಟಾರೆ** | | | **1,793.00** | **776.16** |

* 2020-21ನೇ ಸಾಲಿನಲ್ಲಿ ಕೋವಿಡ್-19ರ ಕಾರಣದಿಂದ ಪ್ರತಿ ಶಾಸಕರುಗಳಿಗೆ ರೂ.100.00ಲಕ್ಷಗಳಿಗೆ ಅನುದಾನವನ್ನು ಸೀಮಿತಗೊಳಿಸಲಾಗಿರುತ್ತದೆ.
** ದಿನಾಂಕ:17-02.2023 ರಂದು ವರ್ಕ್ ಸಾಫ್ಟ್ ತಂತ್ರಾಂಶದಲ್ಲಿ ಲಭ್ಯವಿರುವ ಮಾಹಿತಿ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಈ ರೀತಿ ಶಾಸಕರಿಗೆ ಅನುದಾನ ನೀಡುವ ಮಾನದಂಡಗಳು ಮತ್ತು ಖರ್ಚು ಮಾಡುವ ಮಾರ್ಗಸೂಚಿಗಳು ಯಾವುವು; (ವಿವರ ನೀಡುವುದು) | ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳು ಮೇ-2014 ಮತ್ತು ಕಾಲಕಾಲಕ್ಕೆ ಆಗಿರುವ ಪರಿಷ್ಕೃತ ಆದೇಶಗಳ ಅನ್ವಯ ಶಾಸಕರ ಅನುದಾನವನ್ನು ನಿರ್ವಹಿಸಲಾಗುತ್ತಿದೆ. ಕೆಲ್ಯಾಡ್ಸ್ ಮಾರ್ಗಸೂಚಿಯ ಮತ್ತು ಆದೇಶಗಳ ಪ್ರತಿಯನ್ನು ಇದರೊಂದಿಗೆ ನೀಡಲಾಗಿದೆ. |

.....2.,

| | | |
|---|---|---|
| ಇ) | ವಿಧಾನ ಪರಿಷತ್ ಸದಸ್ಯರಿಗೆ ಆಯಾಯ ಚುನಾವಣಾ ವ್ಯಾಪ್ತಿಯಿದ್ದು ಅವರಿಗೆ ಸಾರ್ವಜನಿಕರಿಂದ ಸಲ್ಲಿಸಲ್ಪಡುವ ಬೇಡಿಕೆಗಳಿಗೆ ಪೂರಕವಾಗಿ ಅನುದಾನ ನೀಡಲಾಗುತ್ತಿದೆಯೇ; ಈ ಕುರಿತು ಸರ್ಕಾರ ಅನುದಾನದ ಮೊತ್ತವನ್ನು ಹೆಚ್ಚಿಸಲು ಉದ್ದೇಶಿಸಿದೆಯೇ; (ವಿವರ ನೀಡುವುದು) | 2013-14ನೇ ಸಾಲಿನಿಂದ ಪ್ರತಿ ಕ್ಷೇತ್ರದ ಅನುದಾನವನ್ನು ರೂ.100.00 ಲಕ್ಷಗಳಿಂದ ರೂ.200.00 ಲಕ್ಷಗಳಿಗೆ ಹೆಚ್ಚಿಸಲಾಗಿದ್ದು, ಪ್ರತಿ ವರ್ಷವು ಮಾನ್ಯ ಶಾಸಕರುಗಳಿಗೆ ಕೆಲ್ಯಾಡ್ಸ್ ಯೋಜನೆಯಡಿ ರೂ.200.00 ಲಕ್ಷಗಳ ಅನುದಾನವನ್ನು ಒದಗಿಸಲಾಗುತ್ತಿದೆ. ಸದರಿ ಅನುದಾನವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ. |
| ಈ) | ವಿವಿಧ ಇಲಾಖಾ ಅನುದಾನಗಳ ಮತ್ತು ಯೋಜನೆಗಳ ಅನುದಾನದ ಕ್ರಿಯಾ ಯೋಜನೆ ಮಾಡುವಾಗ ವಿಧಾನ ಪರಿಷತ್ ಸದಸ್ಯರ ಗಮನಕ್ಕೆ ತಾರದೆ ಮತ್ತು ಅವರ ಅಹವಾಲು ಬೇಡಿಕೆಗಳನ್ನು ಪರಿಗಣಿಸದೆ ಅನುದಾನವನ್ನು ಖರ್ಚು ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಶಾಸಕರ ಪತ್ರಗಳಿಗೆ ಆಯಾಯ ಇಲಾಖೆಗಳು ಮತ್ತು ಸರ್ಕಾರ ಸ್ಪಂದಿಸಿದೆಯೇ; ಸರ್ಕಾರದ ನಿಲುವೇನು; (ಇಲಾಖಾವಾರು ವಿವರ ನೀಡುವುದು) | ವಿವಿಧ ಇಲಾಖೆಗಳು ಕ್ರಿಯಾಯೋಜನೆ ಮಾಡುವಾಗ ಮಾನ್ಯ ಶಾಸಕರುಗಳು ವಿಧಾನ ಪರಿಷತ್ ಸದಸ್ಯರುಗಳ ಪ್ರಸ್ತಾವನೆಯನ್ನು ಆದ್ಯತೆಯ ಮೇರೆಗೆ ಆಯಾ ಇಲಾಖೆಯ ಕಾರ್ಯಕ್ರಮಗಳ ಮಾರ್ಗಸೂಚಿಯನ್ವಯ ಕ್ರಿಯಾಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಹಾಗೂ ಮಾನ್ಯ ಶಾಸಕರುಗಳ ಅಹವಾಲುಗಳನ್ನು ಇಲಾಖಾ ಮಾರ್ಗಸೂಚಿಗಳ ಪ್ರಕಾರ ಬೇಡಿಕೆಗಳನ್ನು ಪರಿಗಣಿಸಿ ಅನುಷ್ಠಾನಗೊಳಿಸಲು ಇಲಾಖಾ ಅಧಿಕಾರಿಗಳಿಂದ ಕ್ರಮವಹಿಸಲಾಗುತ್ತಿದೆ. |
| ಉ) | ರಾಜ್ಯದಲ್ಲಿ 43 ಇಲಾಖೆಗಳಲ್ಲಿ 1802 ಕಾರ್ಯಕ್ರಮಗಳಿದ್ದು ಅವುಗಳು ಯಾವುವು; ಅವುಗಳಲ್ಲಿ ಕೆಲವು ಕಾರ್ಯಕ್ರಮಗಳು ಪುನರಾವರ್ತನೆಯಾಗುತ್ತಿದ್ದು ಅವುಗಳನ್ನು ತರ್ಕಬದ್ಧಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ? (ಇಲಾಖಾವಾರು ವಿವರ ನೀಡುವುದು) | ವಿವಿಧ ಇಲಾಖೆಗಳ ಅಡಿಯಲ್ಲಿ ಸುಮಾರು 1856 ಲೆಕ್ಕ ಶೀರ್ಷಿಕೆ ಇದ್ದು, ಅವುಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.<br><br>ಲೆಕ್ಕ ಶೀರ್ಷಿಕೆ ತರ್ಕಬದ್ಧಗೊಳಿಸಲು ವಿವಿಧ ಇಲಾಖೆಗಳೊಂದಿಗೆ ಸಭೆಗಳನ್ನು ನಡೆಸಿ ತರ್ಕಬದ್ಧಗೊಳಿಸಬಹುದಾದ ಲೆಕ್ಕ ಶೀರ್ಷಿಕೆಗಳ ಬಗ್ಗೆ ಇಲಾಖೆಯಿಂದ ಬಂದ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |

ಸಂಖ್ಯೆ: ಪಿಡಿಎಸ್/14/ಕೆಎಲ್ಎಸ್/2023

(ಮುನಿರತ್ನ)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಹಾಗೂ ತೋಟಗಾರಿಕೆ
ಸಚಿವರು.

## ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ (ಕ.ಶಾ.ಸ್ಥ.ಪ್ರ.ಅ.ಯೋ)/ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳು

### 1. ಹಿನ್ನೆಲೆ:

1.1 ಸ್ಥಳೀಯ ಪ್ರದೇಶಕ್ಕೆ ಪ್ರಯೋಜನವಾಗುವಂತೆ ಕ್ಷೇತ್ರ ಯೋಜನೆ ಪ್ರಕ್ರಿಯೆಯ ಆಧಾರದ ಮೇಲೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಹಣ ಹೂಡಿಕೆ ಮಾಡಿದ್ದರೂ, ಯೋಜನೆಗೆ ಸಂಬಂಧಿಸಿದಂತೆ ಅತ್ಯುತ್ತಮ ಪ್ರಯತ್ನಗಳನ್ನು ಮಾಡಿದ್ದರೂ, ಮೂಲ ಸೌಕರ್ಯದ ಕೆಲವು ಕೊರತೆಗಳು ಹಾಗೆಯೇ ಉಳಿದುಕೊಂಡಿವೆ. ಹೀಗಾಗಿ, ಹಣ ಹೂಡಿಕೆಯು ನಿರರ್ಥಕವಾದಂತಾಗುತ್ತದೆ. ಇದರಿಂದ ಸ್ಥಳೀಯ ಪ್ರದೇಶಕ್ಕೆ ಗರಿಷ್ಠ ಪ್ರಯೋಜನವಾದಂತಾಗುವುದಿಲ್ಲ. ಕ್ಷೇತ್ರ ಯೋಜನೆಯ ಪ್ರಕ್ರಿಯೆಗೆ ಪ್ರಾಧಾನ್ಯತೆ ಇರುವುದರಿಂದ ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ಮತ್ತು ಬಳಕೆದಾರ ಸಮುದಾಯವು ಭಾಗವಹಿಸುವುದಕ್ಕೆ ಇರುವ ವಿಪುಲ ಅವಕಾಶವನ್ನೇ ಸೀಮಿತಗೊಳಿಸಿದೆ. ಕೆಲವು ಪ್ರಮುಖ ಕಾಮಗಾರಿಗಳು ಯಾವುದೇ ಹಾಲಿಯಿರುವ ಯೋಜನೆ ಅಥವಾ ಯೋಜನೇತರ ಕಾರ್ಯಯೋಜನೆಯ ವ್ಯಾಪ್ತಿಗೆ ಒಳಪಡದಿರುವುದರಿಂದ ಅವುಗಳನ್ನು ಕೈಗೆತ್ತಿಕೊಳ್ಳಲು ಆಗದಿರುವ ಸಂದರ್ಭಗಳೂ ಇವೆ.

1.2 ಸ್ಥಳೀಯರ ಆಶೋತ್ತರಗಳನ್ನು ಮತ್ತು ಅಗತ್ಯಗಳನ್ನು ಅತ್ಯುತ್ತಮವಾಗಿ ಈಡೇರಿಸುವ ದೃಷ್ಟಿಯಿಂದ ಹೆಚ್ಚು ಸ್ಪಂದನಶೀಲ ಯೋಜನೆಗಾಗಿ ಮತ್ತು ಸೇವೆಗಳನ್ನು ಒದಗಿಸುವುದಕ್ಕಾಗಿ ಸರ್ಕಾರವು ಬಡವರ ಮತ್ತು ದುರ್ಬಲ ವರ್ಗದವರ ಪ್ರಯೋಜನಕ್ಕಾಗಿ ಆಸ್ತಿಪಾಸ್ತಿಗಳನ್ನು ಸೃಜಿಸುವ, ಮೂಲಸೌಕರ್ಯ ಅಭಿವೃದ್ಧಿಪಡಿಸುವ ಮತ್ತು ಉದ್ಯೋಗವನ್ನು ಸೃಜಿಸುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದೆ, ಅವುಗಳನ್ನು ಯೋಜಿಸುವುದು ಮತ್ತು ಅನುಷ್ಠಾನಕ್ಕೆ ತರುವುದನ್ನು ಶಾಸಕರ ಕ್ಷೇತ್ರದ ಮಟ್ಟದಲ್ಲೇ ಮಾಡಬಹುದಾಗಿದೆ.

1.3 ಸರ್ಕಾರವು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು 2001-02 ರಲ್ಲಿ ಪ್ರತಿ ಕ್ಷೇತ್ರಕ್ಕೆ ತಲಾ ರೂ.25.00 ಲಕ್ಷಗಳನ್ನು ನಿಗದಿಪಡಿಸಿ ಯೋಜನೇತರ ಬಾಬ್ತಿನಲ್ಲಿ ಪ್ರಾರಂಭಿಸಲಾಗಿತ್ತು. 2006-07ನೇ ಸಾಲಿನಿಂದ ಪ್ರತಿ ಕ್ಷೇತ್ರಕ್ಕೆ ಅನುದಾನವನ್ನು ರೂ.25.00 ಲಕ್ಷಗಳಿಂದ ರೂ.100.00 ಲಕ್ಷಗಳಿಗೆ ಹೆಚ್ಚಿಸಲಾಯಿತು. ತದನಂತರ 2013-14ನೇ ಸಾಲಿನಿಂದ ಪ್ರತಿ ಕ್ಷೇತ್ರದ ಅನುದಾನವನ್ನು ರೂ.100.00 ಲಕ್ಷಗಳಿಂದ ರೂ.200.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

2008-09ನೇ ಸಾಲಿನಿಂದ ಈ ಯೋಜನೆಯನ್ನು ಯೋಜನೇತರದಿಂದ ಯೋಜನೆಗೆ ವರ್ಗಾಯಿಸಲಾಯಿತು.

1.4 ಪ್ರತಿ ಶಾಸಕರು ತಮ್ಮ ಕ್ಷೇತ್ರದಲ್ಲಿ ಈ ಮೊತ್ತಕ್ಕೆ ಆಯಾ ವರ್ಷದಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳನ್ನು ಆಯ್ಕೆ ಮಾಡಿ, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳಿಗೆ ಸಲಹೆ ನೀಡಬಹುದಾಗಿದೆ.

1.5 ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯು ಶಾಸಕರ ಕ್ಷೇತ್ರದ ವ್ಯಾಪ್ತಿಯೊಳಗಿರುವ ಸ್ಥಳೀಯ ಪ್ರದೇಶದ ಮೂಲಸೌಕರ್ಯ ಅಭಿವೃದ್ಧಿ ಅಗತ್ಯತೆಗಳನ್ನು ಈಡೇರಿಸಲು ಸಹಭಾಗಿತ್ವದ ಬೇಡಿಕೆಯ ಸ್ಪಂದನಶೀಲ ಅಭಿವೃದ್ಧಿಯ ದೃಷ್ಟಿಕೋನವನ್ನು ಅನುಸರಿಸುವ ಉದ್ದೇಶವಿಟ್ಟುಕೊಂಡಿದೆ. ಇದು, ಇತರ ಸರ್ಕಾರಿ ಕಾರ್ಯಕ್ರಮಗಳ ವ್ಯಾಪ್ತಿಗೆ ಅನ್ಯಥಾ ಒಳಪಡದಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಅವಕಾಶವನ್ನು ಸಹ ಒದಗಿಸುತ್ತದೆ.

1.6 ಒಂದು ಜಿಲ್ಲೆಗಿಂತ ಹೆಚ್ಚು ಜಿಲ್ಲೆಯನ್ನು ಪ್ರತಿನಿಧಿಸುವ ಶಾಸಕರು ತಮ್ಮ ಕ್ಷೇತ್ರದ ವ್ಯಾಪ್ತಿಯೊಳಗಿರುವ ಒಂದು ಅಥವಾ ಒಂದಕ್ಕಿಂತ ಹೆಚ್ಚು ಜಿಲ್ಲೆಯಲ್ಲಿ (ಜಿಲ್ಲೆಗಳಲ್ಲಿ) ಅನುಷ್ಠಾನಕ್ಕಾಗಿ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ನಾಮನಿರ್ದೇಶಿತ ಶಾಸಕರು ಮತ್ತು ವಿಧಾನಸಭೆಯಿಂದ ಆಯ್ಕೆಗೊಂಡ ವಿಧಾನಪರಿಷತ್ ಸದಸ್ಯರು ರಾಜ್ಯಾದ್ಯಂತ ಕಾಮಗಾರಿಗಳನ್ನು ಪ್ರಸ್ತಾಪಿಸಬಹುದು. ಆದರೆ, ಯಾವುದಾದರೊಂದು ಜಿಲ್ಲೆಯನ್ನು ನೋಡಲ್ ಜಿಲ್ಲೆಯಾಗಿ ಆಯ್ಕೆ ಮಾಡಿಕೊಳ್ಳಬೇಕು.

## 2 ಯೋಜನೆಯ ಲಕ್ಷಣಗಳು:

2.1 ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯು, ರಾಜ್ಯಮಟ್ಟದಲ್ಲಿ ಈ ಯೋಜನೆಯ ನೋಡಲ್ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಜಿಲ್ಲೆಗಳ ಜಿಲ್ಲಾಧಿಕಾರಿಗಳು ಜಿಲ್ಲಾಮಟ್ಟದಲ್ಲಿ ಯೋಜನೆಯ ನೋಡಲ್ ಅನುಷ್ಠಾನಾಧಿಕಾರಿಗಳಾಗಿರುವರು. ಶಾಸಕರ ಕ್ಷೇತ್ರವು ಒಂದಕ್ಕಿಂತ ಹೆಚ್ಚು ಜಿಲ್ಲೆಯ ವ್ಯಾಪ್ತಿಯನ್ನು ಹೊಂದಿರುವ ಪಕ್ಷದಲ್ಲಿ, ಸರ್ಕಾರವು ಶಾಸಕರ ಆಯ್ಕೆಗನುಸಾರವಾಗಿ ಯೋಜನೆಯ ಅನುಷ್ಠಾನಕ್ಕಾಗಿ ಒಬ್ಬ ನೋಡಲ್ ಜಿಲ್ಲಾಧಿಕಾರಿಯನ್ನು ಅನುಬಂಧ–I ರನ್ವಯ ನೇಮಕ ಮಾಡಬೇಕು.

2.2 ಪ್ರತಿಯೊಬ್ಬ ಶಾಸಕರು ಜಿಲ್ಲೆಯ ಸಂಬಂಧಪಟ್ಟ ಜಿಲ್ಲಾಧಿಕಾರಿಗೆ ಕಾಮಗಾರಿಗಳ ಆಯ್ಕೆಯನ್ನು ನೀಡುತ್ತಾರೆ. ಆ ಜಿಲ್ಲಾಧಿಕಾರಿಯು ಸ್ಥಾಪಿತ ಸಾಮಾನ್ಯ ಕಾರ್ಯವಿಧಾನಗಳನ್ನು ಪಾಲಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಾರೆ. ಒಂದಕ್ಕಿಂತ ಹೆಚ್ಚು ಜಿಲ್ಲೆಯನ್ನು ಪ್ರತಿನಿಧಿಸುವ ಶಾಸಕರು ಪ್ರಸ್ತಾಪಿಸಿದ ಕಾಮಗಾರಿಗಳನ್ನು ನೋಡಲ್ ಜಿಲ್ಲಾಧಿಕಾರಿಯು ಇತರ ಜಿಲ್ಲೆಧಿಕಾರಿಗಳ ಮೂಲಕ ಯೋಜನೆಯ ಅನುಷ್ಠಾನ ಕೈಗೊಳ್ಳಲು ಕ್ರಮವಹಿಸಿಬೇಕು. ಶಾಸಕರು ಹೆಚ್ಚು ಕಾಮಗಾರಿಗಳನ್ನು ಪ್ರಸ್ತಾಪಿಸಿದಲ್ಲಿ ಕಾಮಗಾರಿಗಳ ಅನುಷ್ಠಾನವನ್ನು ಅನುಬಂಧ–2 ರಲ್ಲಿ ನೀಡಿರುವ ತ:ಖ್ತೆಯಲ್ಲಿ ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಬೇಕು.

2.3 ಈ ಯೋಜನೆಯ ಮೇರೆಗೆ ಶಿಫಾರಸು ಮಾಡಲಾದ ಕಾಮಗಾರಿಗಳು ಸ್ಥಳೀಯ ಪ್ರಾಧಿಕಾರಿಗಳು/ಇತರ ಸರ್ಕಾರಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳ ಸಾಮಾನ್ಯ ಮಾದರಿಗೆ ಅನುರೂಪವಾಗಿರಬೇಕು. ನಿರ್ದಿಷ್ಟವಾಗಿ, ಇಲಾಖೆಗಳು ಇದೇ ರೀತಿಯ ಕಾಮಗಾರಿಗಳಿಗಾಗಿ ಯಾವುದಾದರೂ ಘಟಕ ವೆಚ್ಚಗಳನ್ನು ನಿಗದಿಪಡಿಸಿದಲ್ಲಿ ಅವುಗಳನ್ನು ಸಹ ಈ ಯೋಜನೆಗಾಗಿ ಅನುಸರಿಸಬೇಕು. ಈ ಸ್ಥಳೀಯ ಪ್ರಾಧಿಕಾರಗಳ/ ಇತರ ಸರ್ಕಾರಿ ಇಲಾಖೆಗಳ ಇತರ ಕಾಮಗಾರಿಗಳನ್ನು ಮಂಜೂರು ಮಾಡಿ ಅನುಷ್ಠಾನಗೊಳಿಸಲಾಗುತ್ತಿರುವಂಥ ರೀತಿಯಲ್ಲೇ ಕಾಮಗಾರಿಗಳನ್ನು ಮಂಜೂರು ಮಾಡಿ ಅನುಷ್ಠಾನಗೊಳಿಸಬೇಕು. ನಿರ್ವಹಿಸಬೇಕಾದ ಕಾಮಗಾರಿಗಳು ಸಾರ್ವಜನಿಕ ಉದ್ದೇಶವನ್ನು ಹೊಂದಿರಬೇಕೇ ಹೊರತು ಖಾಸಗಿ ಉದ್ದೇಶವನ್ನು ಹೊಂದಿರತಕ್ಕದ್ದಲ್ಲ. ಸ್ಥಳೀಯ ಪ್ರಾಧಿಕಾರ/ಇತರ ಸಂಬಂಧಪಟ್ಟ ಸರ್ಕಾರಿ ಇಲಾಖೆಯು, ಈ ಯೋಜನೆಯ ಮೇರೆಗೆ ನಿರ್ವಹಿಸಬೇಕಾದ ಕಾಮಗಾರಿಗಳು ತಮ್ಮ ಯಾವುದೇ ಅನುಮೋದಿತ ಕಾರ್ಯಕ್ರಮಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ ಮತ್ತು ಅವುಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿರುವುದಿಲ್ಲವೆಂದು ಪ್ರಮಾಣೀಕರಿಸಬೇಕು.

2.4 ಈ ಯೋಜನೆಯ ಮೇರೆಗಿನ ಕಾಮಗಾರಿಗಳು ಸ್ಥಳೀಯವಾಗಿ ಅವಶ್ಯವೆನಿಸಿದ ಅಗತ್ಯತೆಗಳ ಆಧಾರದ ಮೇಲೆ ಅಭಿವೃದ್ಧಿಯ ಸ್ವರೂಪದವುಗಳಾಗಿರಬೇಕು. ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳ ಸೃಜನೆಗೆ ಒತ್ತು ನೀಡಬೇಕು. ಈ ಯೋಜನೆಯ ಮೇರೆಗೆ ಒದಗಿಸಲಾದ ನಿಧಿಗಳನ್ನು, ರಾಜಸ್ವ ವೆಚ್ಚವನ್ನು ಮಾಡುವುದಕ್ಕಾಗಿ ಅಥವಾ ಅಂಥ ಸೌಲಭ್ಯಗಳನ್ನು ನಿರ್ವಹಿಸಿಕೊಂಡು ಬರಲು ಮಾಡುವ ಸಿಬ್ಬಂಧಿಯ ಮೇಲಿನ ವೆಚ್ಚದಂಥ ಯಾವುದೇ ಆವರ್ತಕ ವೆಚ್ಚಕ್ಕಾಗಿ ಬಳಸಿಕೊಳ್ಳಬಾರದು, ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಳ್ಳಬಹುದಾದಂಥ ಕಾಮಗಾರಿಗಳ ಪಟ್ಟಿಯನ್ನು ಅನುಬಂಧ–III ರಲ್ಲಿ ಮತ್ತು ನಿಷೇಧಿತ ಕಾಮಗಾರಿಗಳ ಪಟ್ಟಿಯನ್ನು ಅನುಭಂಧ–IV ರಲ್ಲಿ ನೀಡಲಾಗಿದೆ.

2.5 ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ನಿಧಿಗಳನ್ನು, ಅದು ಕಾಮಗಾರಿಗಳ ಮುಕ್ತಾಯವಾಗುವ ಪಕ್ಷದಲ್ಲಿ ಮಾತ್ರ ದೊಡ್ಡ ಕಾಮಗಾರಿಗಳ ವೆಚ್ಚವನ್ನು ಭಾಗಶಃ ಭರಿಸುವುದಕ್ಕಾಗಿ ಬಳಸಿಕೊಳ್ಳುವುದು ಕೂಡ ಸೂಕ್ತವಾಗಿರುತ್ತದೆ. ಕಾಮಗಾರಿಯ ಅಂಥ ಭಾಗದ ವೆಚ್ಚಗಳನ್ನು ಈ ಯೋಜನೆಯ ಅಡಿಯಲ್ಲಿ ಭರಿಸುವೆಡೆಯಲ್ಲೆಲ್ಲಾ, ಅದು ಕಾಮಗಾರಿಯ ಸ್ಪಷ್ಟವಾಗಿ ಗುರುತಿಸಬಹುದಾದ ಭಾಗಕ್ಕೆ ಸಂಬಂಧಿಸಿದ್ದಾಗಿರಬೇಕು ಮತ್ತು ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಬಳಸಿದ ಮೊತ್ತದಿಂದ ಕೈಗೊಂಡ ಕಾಮಗಾರಿಯನ್ನು ಗುರುತಿಸುವಂತೆ ಪ್ರತ್ಯೇಕವಾದ ಅಂದಾಜು ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ನಾಮಫಲಕದಲ್ಲಿ ಪ್ರದರ್ಶಿಸುವುದು.

2.6 ಕೆಲವು ವೇಳೆ, ಕಾಮಗಾರಿಯ ನಿರ್ವಹಣೆಯು ಅದರ ಸಹಜ ಸ್ವರೂಪದಲ್ಲೇ ಒಂದು ವರ್ಷಕ್ಕಿಂತ ಹೆಚ್ಚು ಅವಧಿಗೆ ವಿಸ್ತಾರಗೊಳ್ಳಬಹುದು. ಅಂಥ ಸನ್ನಿವೇಶಗಳಲ್ಲಿ, ಯೋಜನೆಯ ಮೇರೆಗಿನ ನಿಧಿಗಳನ್ನು ಕಾಮಗಾರಿಗಳ ನಿರ್ವಹಣೆಯ ಹಂತ ಹಾಗೂ ಕಾಮಗಾರಿಯನ್ನು ಮಾಡುವಂತೆ ಸೂಚಿಸಿರುವ ಶಾಸಕರ ಅಧಿಕಾರದ ಅವಧಿಯನ್ನು ಸ್ಪಷ್ಟವಾಗಿ ಗಮನದಲ್ಲಿಟ್ಟುಕೊಂಡು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಅನುಷ್ಠಾನ ಏಜೆನ್ಸಿಗೆ ದೊರೆಯುವಂತೆ ಮಾಡಬಹುದು.

2.7 ಜಿಲ್ಲಾಧಿಕಾರಿಗಳು ಯಾವ ಸರ್ಕಾರಿ ಇಲಾಖೆಗೆ/ಸ್ಥಳೀಯ ಸಂಸ್ಥೆಗೆ ಕಾಮಗಾರಿಯನ್ನು ವಹಿಸಿಕೊಡುತ್ತಾರೋ ಅಂತಹ ಸರ್ಕಾರಿ ಇಲಾಖೆ/ಸ್ಥಳೀಯ ಸಂಸ್ಥೆಯನ್ನು ಆಯ್ಕೆ ಮಾಡಬೇಕು. ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ 2000 ರ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಇಲಾಖೆ/ಸ್ಥಳೀಯ ಸಂಸ್ಥೆಯು ಕಾಮಗಾರಿಯನ್ನು ಅನುಷ್ಠಾನಗೊಳಿಸಬೇಕು.

2.8 ಶಾಸಕರು ಕಾಮಗಾರಿಯ ಅನುಷ್ಠಾನಕ್ಕೆ ಆಯ್ಕೆ ಮಾಡಿದ ಸ್ಥಳವನ್ನು, ಸ್ವತಃ ಶಾಸಕರೇ ಒಪ್ಪಿದ ಹೊರತು ಬದಲಾಯಿಸತಕ್ಕದ್ದಲ್ಲ.

2.9 ಕಾಮಗಾರಿಗಳ ನಿರ್ವಹಣೆಗಾಗಿ ಆಯ್ಕೆ ಮಾಡಲಾದ ನಿವೇಶನವು, ಅತ್ಯವಶ್ಯವಾಗಿ ಸರ್ಕಾರಿ /ಪುರಸಭೆಯ/ ಪಂಚಾಯಿತಿಯ ನಿವೇಶನವಾಗಿರಬೇಕೆಂದು ಒತ್ತಾಯ ಮಾಡಕೂಡದು. ಅದು, ಕಾಮಗಾರಿಯನ್ನು ಅನುಷ್ಠಾನಗೊಳಿಸುವುದಕ್ಕೆ ಮುಂಚೆ ಸರ್ಕಾರದ ಪರವಾಗಿ ಖಾಸಗಿ ಟ್ರಸ್ಟ್‌ಗಳು, ಖಾಸಗಿ ವ್ಯಕ್ತಿಗಳು ಮೊದಲಾದವರು ಬಿಟ್ಟುಕೊಟ್ಟ ಭೂಮಿಯೂ ಆಗಿರಬಹುದು. ನಿವೇಶನವನ್ನು ಬಿಟ್ಟುಕೊಡುವ ಸಂಸ್ಥೆಯು ಅಥವಾ ವ್ಯಕ್ತಿಯು ಹಾಗೆ ಬಿಟ್ಟುಕೊಡಲು ಅದರ ಮೇಲೆ ಹಕ್ಕನ್ನು ಹೊಂದಿದೆ ಅಥವಾ ಹೊಂದಿದ್ದಾನೆ ಎಂಬುದನ್ನು ದಾಖಲೆಗಳೊಂದಿಗೆ ಪರಿಶೀಲಿಸಬೇಕು.

2.10 ಈ ಯೋಜನೆ ಮೇರೆಗೆ ಕೈಗೊಳ್ಳಬೇಕಾದ ಕಾಮಗಾರಿಗಳ ನಿರ್ವಹಣೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದ ಸಿದ್ಧತೆಯ ಬಗ್ಗೆ, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಆಸ್ತಿಗಳನ್ನು ಯಾರಿಗೆ ವರ್ಗಾಯಿಸಲಾಗಿದೆಯೋ ಅಂತಹ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಅಥವಾ ಸಂಬಂಧಪಟ್ಟ ಏಜೆನ್ಸಿಯಿಂದ ಮಾಹಿತಿಯನ್ನು ಪಡೆದು ಆಸ್ತಿ ನಿರ್ವಹಣೆಯ ಬಗ್ಗೆ ಆಯಾ ಸ್ಥಳೀಯ ಸಂಸ್ಥೆಗಳು/ಏಜೆನ್ಸಿಗಳು ಏರ್ಪಾಡು ಮಾಡುವುದನ್ನು ಜಿಲ್ಲಾಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು.

2.11 ಶಾಸಕರು ಪ್ರಸ್ತಾಪಿಸುವ ಒಂದು ಕಾಮಗಾರಿ ಅಂದಾಜು ಮೊತ್ತವು ಕನಿಷ್ಠ ರೂ.1,00,000/-ಗಳಾಗಿರುತ್ತದೆ.

2.12 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನವಸತಿಯುಳ್ಳ ಕ್ಷೇತ್ರದ ಅಭಿವೃದ್ಧಿ:

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನವಸತಿ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಅತ್ಯವಶ್ಯಕವಾಗಿದೆ. ಇಂತಹ ಜನವಸತಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ವಿಶೇಷ ಗಮನಹರಿಸುವುದು ಅಗತ್ಯವಿದೆ. ಒಂದು ವೇಳೆ ಶಾಸಕರ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಕಡಿಮೆ ಇದ್ದಲ್ಲಿ ಪರಿಶಿಷ್ಟ ಪಂಗಡದವರ ಜನವಸತಿ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವುದು. ಇದೇ ರೀತಿ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡದವರ ಜನಸಂಖ್ಯೆ ಕಡಿಮೆ ಇದ್ದಲ್ಲಿ ಪರಿಶಿಷ್ಟ ಜಾತಿಯವರ ಜನವಸತಿ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವುದು. ಜಿಲ್ಲಾಧಿಕಾರಿಗಳು ತಮಗೆ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗದ ಪ್ರದೇಶಗಳಲ್ಲಿ ಅಗತ್ಯವಿರುವ ಅಭಿವೃದ್ಧಿ ಕಾಮಗಾರಿಗಳ ಪಟ್ಟಿಯನ್ನು ಮುಂಚಿತವಾಗಿಯೇ ತಯಾರಿಸಿ ಇವುಗಳನ್ನು ಕೈಗೊಳ್ಳಲು ಶಾಸಕರುಗಳಿಗೆ ಈ ಕಾಮಗಾರಿಗಳ ಶಿಫಾರಸಿಗೆ ಕೋರಿಕೆ ಸಲ್ಲಿಸುವುದು.

2.13 ಪ್ರಕೃತಿ ವಿಪತ್ತು ಮತ್ತು ವಿಕೋಪ

ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಿಂದ ಪ್ರಕೃತಿ ವಿಕೋಪಕ್ಕೊಳಗಾದ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿ ಕೈಗೊಳ್ಳಲು ಹಾಗೂ ಪ್ರಕೃತಿ ವಿಕೋಪಕ್ಕೊಳಗಾದ ಕ್ಷೇತ್ರಗಳ ಶಾಸಕರು ತಮ್ಮ ಅನುದಾನದಲ್ಲಿ ಗರಿಷ್ಠ ರೂ.25.00 ಲಕ್ಷ ಮೊತ್ತದ ಕಾಮಗಾರಿಗಳನ್ನು ಶಿಫಾರಸು ಮಾಡಬಹುದು ಮತ್ತು

ವಿಪತ್ತಿಗೊಳಪಡದ ಕ್ಷೇತ್ರಗಳ ಶಾಸಕರುಗಳೂ ಸಹ ತಮ್ಮ ಅನುದಾನದಿಂದ 10.00 ಲಕ್ಷ ರೂ.ಗಳ ಮಿತಿಗೊಳಪಟ್ಟು ಕಾಮಗಾರಿಗಳಿಗೆ ಶಿಫಾರಸು ಮಾಡಬಹುದು.

**2.14 ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಅಂಗವಿಕಲರಿಗಾಗಿ ಅನುದಾನ ಮೀಸಲಿಡುವ ಕುರಿತು.**

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಅಂಗವಿಕಲರಿಗಾಗಿ ಪ್ರತಿ ವರ್ಷ ಗರಿಷ್ಠ ರೂ.10.00 ಲಕ್ಷ ಅನುದಾನ ಒದಗಿಸುವ ಕುರಿತು ಸರ್ಕಾರವು ತೀರ್ಮಾನಿಸಿರುತ್ತದೆ. ಸದರಿ ಅನುದಾನದಿಂದ ಅಂಗವಿಕಲರಿಗೆ ತ್ರಿಚಕ್ರ ವಾಹನ ಮತ್ತು ಕೃತಕ ಕಾಲುಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾಧಿಕಾರಿಗಳನ್ನೊಳಗೊಂಡ ಜಿಲ್ಲೆಯ ಮುಖ್ಯ ವೈದ್ಯಾಧಿಕಾರಿಗಳು ಅಂಗವಿಕಲರ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಅರ್ಹತೆಯನ್ನು ದೃಢೀಕರಿಸಿ ಈ ಯೋಜನೆಯ ಸವಲತ್ತು ಒದಗಿಸಬೇಕು.

**3 ಕಾಮಗಾರಿಗಳ ಮಂಜೂರಾತಿ ಮತ್ತು ನಿರ್ವಹಣೆ:**

3.1 ಯಾವ ಜಿಲ್ಲಾಧಿಕಾರಿಯ ಅಧಿಕಾರ ವ್ಯಾಪ್ತಿಯೊಳಗೆ ಕಾಮಗಾರಿಯನ್ನು ನಿರ್ವಹಿಸಬೇಕಾಗಿದೆಯೋ ಆ ಜಿಲ್ಲಾ ಜಿಲ್ಲಾಧಿಕಾರಿಯು ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡತಕ್ಕದ್ದು.

3.2 ಆರ್ಥಿಕ ವರ್ಷದಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಕಾಮಗಾರಿಗಳ ಪಟ್ಟಿಯನ್ನು ಶಾಸಕರು, ಯಾವ ಜಿಲ್ಲಾಧಿಕಾರಿಯ ಅಧಿಕಾರವ್ಯಾಪ್ತಿಯೊಳಗೆ ನಿರ್ವಹಿಸಬೇಕಾಗಿದೆಯೋ ಆ ಜಿಲ್ಲಾಧಿಕಾರಿಗಳಿಗೆ ಆರ್ಥಿಕ ವರ್ಷ ಪ್ರಾರಂಭಗೊಂಡಂತೆಯೇ ಸಲ್ಲಿಸುವುದು.

ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಶಾಸಕರುಗಳಿಂದ ಕಾಮಗಾರಿ ಪಟ್ಟಿಯನ್ನು ಪಡೆದುಕೊಂಡು ಶಾಸಕರುಗಳನ್ನೊಳಗೊಂಡಂತೆ ಅನುಷ್ಠಾನಾಧಿಕಾರಿಗಳೊಂದಿಗೆ ಸಭೆ ನಡೆಸಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಅಂತಿಮಗೊಳಿಸುವುದು. ಅನುಮೋದನೆಗೊಂಡ ಕ್ರಿಯಾ ಯೋಜನೆಯ ಪ್ರತಿಯನ್ನು ಯೋಜನಾ ಇಲಾಖೆಗೆ ಸಲ್ಲಿಸುವುದು.

3.3 ಜಿಲ್ಲಾಧಿಕಾರಿಗಳು ಕಾಮಗಾರಿಯನ್ನು ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಪರಿಶೀಲಿಸತಕ್ಕದ್ದು ಹಾಗೂ ಮಂಜೂರಾತಿ ಪತ್ರವನ್ನು ನೀಡಬೇಕು ಮತ್ತು ಅದನ್ನು ಶಾಸಕರಿಗೆ ತಿಳಿಸಬೇಕು. ಒಂದು ವೇಳೆ ಕಾಮಗಾರಿಗೆ ನಿವೇಶನ ಲಭ್ಯವಿರದಿದ್ದರೆ, ಕಾಮಗಾರಿಯನ್ನು ಕೈಗೊಳ್ಳಲು ಅಡೆತಡೆಗಳಿದ್ದರೆ ಇದನ್ನು ಶಾಸಕರು ಪ್ರಸ್ತಾವನೆ ಕಳುಹಿಸಿದ ದಿನಾಂಕದಿಂದ 30 ದಿನದೊಳಗೆ ತಿಳಿಸಬೇಕು.

3.4 ತಾಂತ್ರಿಕ ಅಂದಾಜುಗಳ ಸಿದ್ಧತೆಗಾಗಿ, ಜಿಲ್ಲಾಧಿಕಾರಿಗಳು, ಅನುಷ್ಠಾನ ಏಜೆನ್ಸಿಗಳಿಗೆ ಮಂಜೂರಾತಿ ಪತ್ರವನ್ನು ಕಳುಹಿಸತಕ್ಕದ್ದು. ಅನುಷ್ಠಾನ ಏಜೆನ್ಸೀಸ್ ಗಳೆಂದರೆ ಪಿ.ಆರ್.ಇ.ಡಿ., ಲೋಕೋಪಯೋಗಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ ನಿರ್ಮಿತಿ ಕೇಂದ್ರ ಹಾಗೂ ಇತರೆ ಸ್ಥಳೀಯ ಸರ್ಕಾರಗಳ ಅನುಷ್ಠಾನಾಧಿಕಾರಿಗಳು ಸಕ್ಷಮ ಪ್ರಾಧಿಕಾರದಿಂದ ಅಗತ್ಯ ತಾಂತ್ರಿಕ ಮಂಜೂರಾತಿ ಪಡೆದುಕೊಂಡು ಆ ಅಂದಾಜುಗಳನ್ನು ಆಡಳಿತಾತ್ಮಕ ಅನುಮೋದನೆಗಾಗಿ 30 ದಿನಗಳೊಳಗಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

ಸರ್ಕಾರಿ ಆದೇಶ ಸಂಖ್ಯೆ:ಪಿಡಿ 39 ಯೋವಿವಿ 2012(ಪಿ), ದಿನಾಂಕ:10.07.2012 ರಲ್ಲಿ ಸಹಾಯಕ ಕಾರ್ಯಪಾಲ ಅಭಿಯಂತರರಿಗೆ ರೂ.5.00 ಲಕ್ಷಗಳವರೆಗಿನ ಕಾಮಗಾರಿಗಳಿಗೆ ತಾಂತ್ರಿಕ ಅನುಮೋದನೆ ನೀಡುವ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

3.5 ಜಿಲ್ಲಾಧಿಕಾರಿಯು ಈ ಯೋಜನೆಯಲ್ಲಿ ಈ ಕೆಳಕಂಡ ಅಂಶಗಳು ಸೇರಿಲ್ಲ ಎಂಬುದನ್ನು ಪರಿಶೀಲಿಸಿ ಮಂಜೂರಾತಿ ನೀಡತಕ್ಕದ್ದು.

ಅ. ಆವರ್ತಕ ವೆಚ್ಚ

ಆ. ಸಿಬ್ಬಂದಿ ಇರುವಂಥ ಯೋಜನೆಗಳು (ಯೋಜನೆಯಲ್ಲಿ ಖಾಯಂ ಅಥವಾ ಎನ್‌ಎಂಆರ್ ಅಥವಾ ದಿನಗೂಲಿ ಆಧಾರದಲ್ಲಿ ಯಾವುದೇ ಸಿಬ್ಬಂದಿಯ ನೇಮಕಕ್ಕೆ ಅವಕಾಶವಿರಬಾರದು).

ಇ. ಸಮೀಕ್ಷೆಗಳನ್ನು/ತನಿಖೆಗಳನ್ನು ನಡೆಸುವುದು.

ಈ. ಹಳೆಯ ಬಿಲ್ಲುಗಳ ಪಾವತಿ.

3.6 ಕರ್ನಾಟಕ ಸಾರ್ವಜನಿಕ/ಪಾರದರ್ಶಕ ಕಾಯ್ದೆಯನ್ನು ತಪ್ಪಿಸಲು ಹಾಗೂ ಇತರ ಪ್ರಕ್ರಿಯೆಗಳಿಗೆ ಅಡ್ಡಿಯಾಗುವಂತೆ ಅಂದಾಜನ್ನು ಅನಗತ್ಯವಾಗಿ ಬೇರ್ಪಡಿಸಿ ಕೆ.ಟಿ.ಪಿ.ಪಿ ಅಧಿನಿಯಮ ಉಲ್ಲಂಘನೆಯಾಗಿಲ್ಲವೆಂದು ಖಚಿತಪಡಿಸಿಕೊಂಡು ಆ ಕಾಮಗಾರಿಗೆ ಜಿಲ್ಲಾಧಿಕಾರಿಯು ಆಡಳಿತಾತ್ಮಕ ಅನುಮೋದನೆ ನೀಡತಕ್ಕದ್ದು. ಆಡಳಿತಾತ್ಮಕ ಅನುಮೋದನೆ ನೀಡುವಲ್ಲಿ Transaction of Business Rules ಅನ್ನು ಪಾಲಿಸತಕ್ಕದ್ದು.

3.7 ಕ್ರಿಯಾ ಯೋಜನೆ ಅನುಮೋದನೆಗೊಂಡ 30 ದಿನಗಳ ಒಳಗಾಗಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವುದು.

3.8 ಜಿಲ್ಲಾ ಮಟ್ಟದಲ್ಲಿ ಈ ಯೋಜನೆಯ ಮೇರೆಗಿನ ಕಾಮಗಾರಿಗಳ ಸಮನ್ವಯ ಮತ್ತು ಸಮಗ್ರ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳು ಹೊಂದಿರುವರು. ಕಾಮಗಾರಿಯ ವಿವರವಾದ ಅಂದಾಜುಗಳ ಸಿದ್ಧತೆ, ಅದರ ತಾಂತ್ರಿಕ ಮಂಜೂರಾತಿ, ಕಾರ್ಯಗತಗೊಳಿಸುವಾಗ ವಹಿಸುವ ಉಸ್ತುವಾರಿ ಮತ್ತು ಲೆಕ್ಕಪತ್ರಗಳ ನಿರ್ವಹಣೆಯು ಸಂಬಂಧಪಟ್ಟ ಕಾರ್ಯನಿರ್ವಾಹಕ ಪ್ರಾಧಿಕಾರದ ಹೊಣೆಯಾಗಿರುತ್ತದೆ.

3.9 ನಿರ್ದಿಷ್ಟ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಅಂದಾಜುಗಳಲ್ಲಿ/ವೆಚ್ಚಗಳಲ್ಲಿ ಹೆಚ್ಚಳವಾದಾಗ, ಆ ಕ್ಷೇತ್ರಕ್ಕಾಗಿ ಒದಗಿಸಿದ ವಾರ್ಷಿಕ ಅನುದಾನಕ್ಕೆ ಮೀರಬಾರದು, ಅಂದಾಜು ಮಾಡಿದ ವೆಚ್ಚಕ್ಕಿಂತ ಹೆಚ್ಚಾಗಿ ಟೆಂಡರ್ ಮೊತ್ತವಿದ್ದರೆ ಅಂತಹ ಪ್ರಕರಣಗಳಲ್ಲಿ ಸಕ್ಷಮ ತಾಂತ್ರಿಕ ಪ್ರಾಧಿಕಾರವು, ಕಾಮಗಾರಿಗಳಿಗೆ ಅನುಮೋದನೆ ನೀಡುವ ಮುಂಚೆ, ಜಿಲ್ಲಾಧಿಕಾರಿಗಳ ಪೂರ್ವಾನುಮೋದನೆ ಪಡೆಯಬೇಕು. ಹಾಗೂ ಜಿಲ್ಲಾಧಿಕಾರಿಗಳು ಪರಿಷ್ಕೃತ ಅಂದಾಜು ವೆಚ್ಚಗಳಿಗೆ ಶಾಸಕರುಗಳ ಪೂರ್ವಾನುಮತಿ ಪಡೆದು ಆಡಳಿತಾತ್ಮಕ ಅನುಮೋದನೆ ನೀಡಬೇಕು.

3.10 ಸಾಮಾನ್ಯವಾಗಿ ದರ ಹೆಚ್ಚಳಕ್ಕೆ ಅವಕಾಶ ನೀಡದೆ ಉದ್ದೇಶಿತ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸದರಿ ಕಾಮಗಾರಿಗಳು ಅಪೂರ್ಣವಾಗದಂತೆ ನೋಡಿಕೊಳ್ಳುವುದು. ಜಿಲ್ಲಾಧಿಕಾರಿಗಳಿಗೆ ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದ ಹಣವನ್ನು ಹಿಂದಿನ ವರ್ಷದ ಬಾಕಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉಪಯೋಗಿಸಬಹುದಾಗಿದೆ.

3.11 ಯೋಜನೆಯ ಮೇಲಿನ ವೆಚ್ಚದ ಒಂದು ಭಾಗಕ್ಕೆ ಯಾವುದೇ ಇತರ ಏಜೆನ್ಸಿಯು ಹಣವನ್ನು ಒದಗಿಸಿದ್ದರೆ, ಉದ್ದೇಶಿತ ಯೋಜನೆಗಾಗಿ ಅಗತ್ಯವಿರುವ ನಿಧಿಗಳನ್ನು ತಾವು ಮಂಜೂರು ಮಾಡಿದ್ದೇವೆಂದು ಜಿಲ್ಲಾಧಿಕಾರಿಗಳಿಗೆ ಲಿಖಿತ ದೃಢೀಕರಣ ನೀಡಿದ ನಂತರವೇ ವಾಸ್ತವಿಕ ಮಂಜೂರಾತಿ ನೀಡಬೇಕು/ಕಾರ್ಯಗತಗೊಳಿಸಬೇಕು. ವೆಚ್ಚದ ಭಾಗವನ್ನು ವಹಿಸಿಕೊಂಡಂಥ ಏಜೆನ್ಸಿಯಲ್ಲದ ಬೇರೊಂದು ಏಜೆನ್ಸಿಯು ಕಾಮಗಾರಿಗಳನ್ನು ನಿರ್ವಹಣೆ ಮಾಡಬೇಕಾಗಿದ್ದರೆ, ಅಂಥ ಬೇರೆ ಏಜೆನ್ಸಿಯ ಪಾಲನ್ನು ಮಂಜೂರಾತಿಗಿಂತ ಮುಂಚೆ ಪಡೆದುಕೊಳ್ಳಬೇಕು. ಅಂಥ ಸಂದರ್ಭಗಳಲ್ಲಿ, ಯಾವುದೇ ಕಾರಣಕ್ಕೂ, ಅಂಥ ಇತರ ಏಜೆನ್ಸಿಗಳು ನಿಧಿಗಳನ್ನು ವಾಸ್ತವಿಕವಾಗಿ ಬಿಡುಗಡೆ ಮಾಡುವುದಕ್ಕೆ ಮುಂಚಿತವಾಗಿ ಅಥವಾ ಅದನ್ನು ನಿರೀಕ್ಷಿಸಿ ಹಣವನ್ನು ಬಿಡುಗಡೆ ಮಾಡಬಾರದು.

3.12 ವಾಸ್ತವಿಕವಾಗಿ ನಿರ್ವಹಣಾ ಅವಧಿಯಲ್ಲಿ ಯಾವುದೇ ಮಾರ್ಪಾಡುಗಳು / ಬದಲಾವಣೆಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದಲ್ಲ ಮತ್ತು ಅಂಥ ಎಲ್ಲಾ ಹೊಂದಾಣಿಕೆಗಳನ್ನು, ಸಮಗ್ರ ಹಂಚಿಕೆಯು ಮೀರದಿರುವುದಕ್ಕೆ ಮಾತ್ರ ಒಳಪಟ್ಟು ಜಿಲ್ಲಾಮಟ್ಟದಲ್ಲಿಯೇ ಮಾಡತಕ್ಕದ್ದು. ಅಂಥ ಎಲ್ಲಾ ಮಾರ್ಪಾಡುಗಳಿಗೆ ಅನುಮೋದನೆ ನೀಡಲು ಜಿಲ್ಲಾಧಿಕಾರಿಯು ಸಕ್ಷಮರಾಗಿರುತ್ತಾರೆ.

3.13 ಸಾಮಾನ್ಯ ಹಣಕಾಸು ಮತ್ತು ಲೆಕ್ಕಪರಿಶೋಧನಾ ಪ್ರಕ್ರಿಯೆಗಳು ಈ ಮಾರ್ಗಸೂಚಿಗಳಿಗೊಳಪಟ್ಟು ಈ ಯೋಜನೆಯ ಮೇರೆಗೆ ತೆಗೆದುಕೊಂಡ ಎಲ್ಲಾ ಕ್ರಮಗಳಿಗೂ ಅನ್ವಯವಾಗುತ್ತವೆ.

3.14 ಈ ಯೋಜನೆಯ ಮೇರೆಗೆ ಪ್ರತಿ ವರ್ಷ ಮಾಡುವ ಹಂಚಿಕೆಯನ್ನು ಕ್ಷೇತ್ರಕ್ಕಾಗಿ ಮಾಡಲಾಗಿರುತ್ತದೆ. ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರು ಬದಲಾಗಬಹುದಾದರೂ, ಅಂಥ ಬದಲಾವಣೆಗೆ ಕಾರಣಗಳೇನೇ ಇರಬಹುದು, ಯೋಜನೆಯ ಮೇರೆಗೆ ಕ್ಷೇತ್ರಕ್ಕಾಗಿರುವ ನಿಧಿ ಹಂಚಿಕೆಯನ್ನು, ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕ್ರಮ ಮುಂದುವರಿಕೆಯನ್ನು ಹಾಗೇ ನಿರ್ವಹಿಸಿಕೊಂಡು ಬರಬೇಕಾಗುತ್ತದೆ. ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಸಂಬಂಧದಲ್ಲಿ ಹಿಂದಿನ ಮತ್ತು ಈಗಿನ ಶಾಸಕರು ಹಾಗೂ ಸಂಬಂಧಪಟ್ಟ ಅನುಷ್ಠಾನ ಏಜೆನ್ಸಿಗಳ ನಡುವೆ ಸಮನ್ವಯ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.

3.15 ಕಾರಣವೇನೇ ಇರಲಿ, ಶಾಸಕರು ಬದಲಾವಣೆಯಾದಾಗ, ಕೆಳಕಂಡ ತತ್ವಗಳನ್ನು ಸಾಧ್ಯವಾದಷ್ಟು ಮಟ್ಟಿಗೆ, ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕು.

(i) ಹಿಂದಿನ ಶಾಸಕರು ಗುರುತಿಸಿದ ಕಾಮಗಾರಿಯು ಕಾರ್ಯಗತಗೊಳ್ಳುತ್ತಿದ್ದಲ್ಲಿ ಅದನ್ನು ಪೂರ್ಣಗೊಳಿಸಬೇಕು.

(ii) ಹಿಂದಿನ ಶಾಸಕರಿಂದ ಗುರುತಿಸಲಾದ ಕಾಮಗಾರಿಯು ಆಡಳಿತಾತ್ಮಕ ಕಾರಣಗಳಿಂದಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಲಹೆ ಸ್ವೀಕರಿಸಿದಂಥ ದಿನಾಂಕದಿಂದ 60 ದಿನಗಳ ಅವಧಿ ಮೀರಿ ಮಂಜೂರಾಗದೆ ಬಾಕಿ ಉಳಿದಿದ್ದಲ್ಲಿ, ಕಾಮಗಾರಿಯು ಬೇರೆಲ್ಲಾ ರೀತಿಯಿಂದ ನಿಬಂಧನೆಗಳಿಗೆ ಅನುಸಾರವಾಗಿದ್ದಲ್ಲಿ, ಅದನ್ನೂ ಸಹ ಪೂರ್ಣಗೊಳಿಸಬೇಕು.

(iii) ಹಿಂದಿನ ಶಾಸಕರು ಕಾಮಗಾರಿಯನ್ನು ಗುರುತಿಸಿದ್ದಲ್ಲಿ, ಆದರೆ ಅದನ್ನು ಮೇಲಿನ ಹಿಂದಿನ ಉಪ-ಪ್ಯಾರಾದಲ್ಲಿ ತಿಳಿಸಿರುವಂಥ ಕಾರಣಕ್ಕಲ್ಲದೆ ಬೇರೆ ಕಾರಣಗಳಿಂದಾಗಿ ನಿರ್ವಹಿಸಿಲು ಕೈಗೆತ್ತಿಕೊಳ್ಳದಿದ್ದಲ್ಲಿ, ಹಾಲಿ ಶಾಸಕರ ಸ್ಥಿರೀಕರಣಕ್ಕೆ ಒಳಪಟ್ಟು ಅದನ್ನು ನಿರ್ವಹಿಸಬಹುದು.

3.16 ಸೃಜಿಸಿದ ಆಸ್ತಿ/ಕೈಗೊಂಡ ಕಾಮಗಾರಿಗಳ ಸ್ಥಳಗಳ ಛಾಯಾಚಿತ್ರಗಳನ್ನು ಕಾಮಗಾರಿಯನ್ನು ಪ್ರಾರಂಭಗೊಳಿಸುವ ಮೊದಲು ಮತ್ತು ಕಾಮಗಾರಿ ಮುಕ್ತಾಯಗೊಂಡ ನಂತರದ ಡಿಜಿಟೈಸ್ಡ್ ಫೋಟೋಗಳೊಂದಿಗೆ ಜಿಲ್ಲಾಡಳಿತವು ನಿರ್ವಹಿಸತಕ್ಕದ್ದು.

3.17 ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅನುದಾನದಿಂದ ಕ್ಷೇತ್ರವಾರು/ಶಾಸಕವಾರು ಕೈಗೊಂಡ ಕಾಮಗಾರಿಗಳು ಮತ್ತು ನಿರ್ಮಿಸಿದ ಆಸ್ತಿಗಳ ರಿಜಿಸ್ಟರ್ ಅನ್ನು ಜಿಲ್ಲಾಡಳಿತವು ನಿರ್ವಹಿಸುವುದು.

3.18 ಈ ಯೋಜನೆಗಾಗಿ ಜಿಲ್ಲಾಮಟ್ಟದಲ್ಲಿ ಪ್ರತ್ಯೇಕ ಲೆಕ್ಕವನ್ನು ನಿರ್ವಹಿಸುವುದು.

3.19 ಪ್ರತಿ ಜಿಲ್ಲೆಯ ವಾರ್ಷಿಕ ಲೆಕ್ಕವನ್ನು ಸ್ಥಳೀಯ ಜಿಲ್ಲಾ ಲೆಕ್ಕ ಪರಿಶೋಧಕರಿಗೆ ಮುಂದಿನ ಮೇ 15 ನೇ ತಾರೀಖಿನೊಳಗೆ ಲೆಕ್ಕಪರಿಶೋಧನೆಗೆ ಸಲ್ಲಿಸತಕ್ಕದ್ದು.

4 ನಿಧಿಗಳ ಬಿಡುಗಡೆ:

4.1 ಯೋಜನಾ ಇಲಾಖೆಯು ನೋಡಲ್ ಜಿಲ್ಲಾಧಿಕಾರಿಗಳಿಗೆ ಅನುಷ್ಠಾನದಲ್ಲಿರುವ ಕಾಮಗಾರಿಗಳ ವಾಸ್ತವಿಕ ಮತ್ತು ಹಣಕಾಸು ಪ್ರಗತಿಯ ಆಧಾರದ ಮೇಲೆ ಹಾಗೂ ಕಾಮಗಾರಿಗಳಿಗೆ ಇನ್ನೂ ಹೆಚ್ಚಿನ ನಿಧಿಗಳ ಅಗತ್ಯತೆಯ ಆಧಾರದ ಮೇಲೆ ನಿಧಿಯನ್ನು ವರ್ಷಕ್ಕೆ ಎರಡು ಕಂತುಗಳಲ್ಲಿ ಬಿಡುಗಡೆ ಮಾಡತಕ್ಕದ್ದು. ನಿರ್ದಿಷ್ಟ ವರ್ಷದಲ್ಲಿ ಬಿಡುಗಡೆಯಾದ ನಿಧಿಗಳ ಪೈಕಿ ಬಳಕೆಯಾಗದೆ ಉಳಿದ ಹಣ ಜಿಲ್ಲಾಧಿಕಾರಿಗಳ ಬಳಿ ಇದ್ದರೆ, ಅದನ್ನು ಮುಂದಿನ ವರ್ಷಕ್ಕೆ ಮಾತ್ರ ಉಪಯೋಗಿಸಬಹುದಾಗಿದೆ. ಆ ಮೊತ್ತವು ಮುಂದಿನ ವರ್ಷದ ಕೊನೆಯಲ್ಲಿ ಖರ್ಚಾಗದೆ ಉಳಿದರೆ ಆ ಮೊತ್ತವನ್ನು ರದ್ದುಪಡಿಸಲಾಗುವುದು. ಅಲ್ಲದೆ, ಆ ವರ್ಷದಲ್ಲಿ ನಿಧಿಗಳನ್ನು ಕ್ಲೇಮು ಮಾಡದಿದ್ದಲ್ಲಿ, ಹಣಕಾಸು ವರ್ಷದ ಕೊನೆಯಲ್ಲಿ ಹಂಚಿಕೆಯನ್ನು ರದ್ದುಪಡಿಸತಕ್ಕದ್ದು.

4.2 ಮೊದಲನೇ ಕಂತನ್ನು ಹಣಕಾಸು ವರ್ಷದ ಪ್ರಾರಂಭದ ಅವಧಿಯಲ್ಲಿ ಸಾಧ್ಯವಾದಷ್ಟು ಬೇಗನೆ ಬಿಡುಗಡೆ ಮಾಡತಕ್ಕದ್ದು. ನೋಡಲ್ ಜಿಲ್ಲಾಧಿಕಾರಿಗಳು, ಯೋಜನೆಯ ಮುಂದಿನ ಕಂತುಗಳ ಬಿಡುಗಡೆಗಾಗಿ ಕೋರಿಕೆಯನ್ನು ಸಲ್ಲಿಸತಕ್ಕದ್ದು. ಎರಡನೆಯ ಕಂತನ್ನು ಈ ಕಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲಾಗುವುದು.

(i) ಹಿಂದಿನ ವರ್ಷದಲ್ಲಿ ಬಿಡುಗಡೆ ಮಾಡಿದ ಹಣದ ಶೇಕಡ 80 ರಷ್ಟನ್ನು ಖರ್ಚುಮಾಡಿರಬೇಕು.

(ii) ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಹಣವು ಮಂಜೂರಾದ ಎಲ್ಲಾ ಕಾಮಗಾರಿಗಳ ಮೊತ್ತವನ್ನು ಗಣನೆಗೆ ತೆಗೆದುಕೊಂಡು ನಂತರ ರೂ.25.00 ಲಕ್ಷಕ್ಕಿಂತ ಕಡಿಮೆ ಇರಬೇಕು.

(iii) ಸಂಬಂಧಪಟ್ಟ ಶಾಸಕರ ನಿಧಿಯ ಖರ್ಚಾಗದೇ ಉಳಿದಿರುವ ಹಣವು ರೂ.50.00 ಲಕ್ಷಗಳಿಗಿಂತ ಕಡಿಮೆ ಇರಬೇಕು.

(iv) ಹಿಂದಿನ ವರ್ಷದ ಹಣ ಬಳಕೆ ಪ್ರಮಾಣ ಪತ್ರಗಳನ್ನು ಕಳುಹಿಸಬೇಕು ಹಾಗೂ ಅದಕ್ಕಿಂತ ಹಿಂದಿನ ವರ್ಷದ ಆಡಿಟ್ ವರದಿಗಳನ್ನು ಯೋಜನೆ ಇಲಾಖೆಗೆ ಕಳುಹಿಸಬೇಕು.

(v) ಜಿಲ್ಲಾಧಿಕಾರಿಗಳು ಎರಡನೆಯ ಕಂತನ್ನು ಬಿಡುಗಡೆ ಮಾಡುವಾಗ Online ಮಾಸಿಕ ಪ್ರಗತಿಯವರದಿಗಳನ್ನು ವೀಕ್ಷಿಸಲಾಗುವುದು. ಜಿಲ್ಲಾಧಿಕಾರಿಗಳು ಮಾಸಿಕ ಪ್ರಗತಿಯ ವರದಿಯನ್ನು ಯೋಜನಾ ಇಲಾಖೆಗೆ ಕಳುಹಿಸುವುದು.

4.3 ಜಿಲ್ಲಾಧಿಕಾರಿಗಳಿಂದ ನಿಧಿಗಳ ಬಿಡುಗಡೆ:

ಜಿಲ್ಲಾಧಿಕಾರಿಗಳು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆದು ಆಡಳಿತಾತಕ ಅನುಮೋದನೆ ನೀಡಿದ ನಂತರ ಕಾಮಗಾರಿಗೆ ಮೊದಲನೆಯ ಕಂತಾಗಿ ಶೇಕಡ 75 ರಷ್ಟು ಹಣವನ್ನು ಬಿಡುಗಡೆ ಮಾಡುವುದು. ಈ ಅನುದಾನಕ್ಕೆ ಹಣ ವಿನಿಯೋಗ ಪ್ರಮಾಣ ಪಡೆದ ನಂತರ ಹಾಗೂ ಅನುಷ್ಠಾನಾಧಿಕಾರಿಗಳು ಕಾಮಗಾರಿಯನ್ನು ಪೂರ್ತಿಗೊಳಿಸಿದ ಬಗ್ಗೆ ಧೃಢೀಕರಣ ಪತ್ರ ನೀಡಿದ 15 ದಿನಗಳೊಳಗೆ ಜಿಲ್ಲಾಧಿಕಾರಿಗಳು ಉಳಿದ ಶೇಕಡ 25 ರಷ್ಟನ್ನು ಬಿಡುಗಡೆ ಮಾಡುವುದು. ಹಣ ಬಿಡುಗಡೆ ಮಾಡುವ ಮುನ್ನ ಈ ಕೆಳಗಿನ ಅಂಶಗಳನ್ನು ಪರಿಶೀಲಿಸುವುದು;

1. ಕಾಮಗಾರಿಯು ಮಂಜೂರಾದ ಸ್ಥಳದಲ್ಲಿಯೇ ಅನುಷ್ಠಾನಗೊಂಡಿದೆಯೇ?
2. ಅಂದಾಜು ವೆಚ್ಚಕ್ಕೆ ಅನುಗುಣವಾಗಿದೆಯೇ?
3. ಕಾಮಗಾರಿ ಗುಣಮಟ್ಟ ತೃಪ್ತಿಕರವಾಗಿದೆಯೇ?
4. ಮೊದಲನೆಯ ಕಂತಿನ ಹಣ ವಿನಿಯೋಗ ಪ್ರಮಾಣ ಪತ್ರ ನೀಡಲಾಗಿದೆಯೇ?
5. ಅನುಷ್ಠಾನಾಧಿಕಾರಿಗಳಿಂದ ಕಾಮಗಾರಿಯನ್ನು ಪೂರ್ಣಗೊಳಿಸಿದ ಬಗ್ಗೆ ಧೃಢೀಕರಣ ಪತ್ರ ನಗದು ಪುಸ್ತಕ ಹಾಗೂ ಮೆಶರ್‌ಮೆಂಟ್ ಬುಕ್‌ಗಳ ಉದೃತ ಭಾಗವನ್ನು ಪಡೆಯಬೇಕು.

4.4 ಕಾಮಗಾರಿಗಳು ಪೂರ್ಣಗೊಂಡ 60 ದಿನಗಳೊಳಗೆ ಇದಕ್ಕೆ ಲಗತ್ತಿಸಿರುವ **ಅನುಬಂಧ–V** ರ ಪ್ರಕಾರ ದೃಢೀಕರಿಸಿಕೊಳ್ಳಬೇಕು. ಈ ಯೋಜನೆ ಅಡಿ ಕೈಗೊಂಡ ಟ್ರಸ್ಟ್ ಮತ್ತು ಸೊಸೈಟಿಗಳ ಶೇಕಡ 100ರಷ್ಟು ಕಾಮಗಾರಿಗಳನ್ನು ಮತ್ತು ಇತರ ಕಾಮಗಾರಿಗಳ ಶೇಕಡ 10 ರಷ್ಟನ್ನು ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾಧಿಕಾರಿಗಳಿಂದ ನೇಮಿಸಲ್ಪಟ್ಟ ಹಿರಿಯ ಅಧಿಕಾರಿಗಳು ತಪಾಸಣೆ ಕೈಗೊಂಡು ವರದಿಯನ್ನು **ನಿರ್ದೇಶಕರು, ಎಡಿಬಿ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ** ಇವರಿಗೆ ತಪ್ಪದೇ ಸಲ್ಲಿಸುವುದು.

4.5 ಜಿಲ್ಲಾಧಿಕಾರಿಗಳು/ಎಲ್ಲಾ ಅನುಷ್ಠಾನ ಏಜೆನ್ಸಿಗಳು ಈ ಯೋಜನೆಯ ಅಡಿಯಲ್ಲಿ ಬಿಡುಗಡೆಯಾದ ನಿಧಿಗಳಿಗಾಗಿ ಪ್ರತ್ಯೇಕ ಲೆಕ್ಕಗಳನ್ನು ಇಟ್ಟುಕೊಂಡಿರತಕ್ಕದ್ದು. ಜಿಲ್ಲಾಧಿಕಾರಿಗಳು ಈ ಯೋಜನೆಯ ಅಡಿಯಲ್ಲಿ ಬಿಡುಗಡೆಯಾದ ನಿಧಿಗಳನ್ನು ಸರ್ಕಾರಿ ಖಜಾನೆಯಲ್ಲಿ ತಮ್ಮ ಪಿಡಿ ಖಾತೆಯಲ್ಲಿ ಇಡುವುದು.

4.6 ಕಾರಣಾಂತರಗಳಿಂದ ಶಾಸಕರ ಅವಧಿಯು ಒಂದು ವರ್ಷಕ್ಕಿಂತ ಕಡಿಮೆ ಇರಬಹುದು. ಇಂತಹ ಸಂದರ್ಭಗಳಲ್ಲಿ ವಾರ್ಷಿಕ ಅನುದಾನವನ್ನು ಕೆಳಕಂಡಂತೆ ನಿಗದಿಪಡಿಸಲಾಗುವುದು.

| ಆರ್ಥಿಕ ವರ್ಷದಲ್ಲಿ ಶಾಸಕರಾಗಿದ್ದ ಅವಧಿ | ನಿಗದಿಪಡಿಸಬೇಕಾದ ಅನುದಾನ |
|---|---|
| (ಎ) ಮೂರು ತಿಂಗಳಿಗಿಂತ ಕಡಿಮೆ | ಇಲ್ಲ |
| (ಬಿ) ಒಂಬತ್ತು ತಿಂಗಳವರೆಗೆ | ವಾರ್ಷಿಕ ಅನುದಾನದ ಶೇಕಡ 50 ರಷ್ಟು |
| (ಸಿ) ಒಂಬತ್ತು ತಿಂಗಳಿಗಿಂತ ಹೆಚ್ಚಿನ ಅವಧಿ | ವಾರ್ಷಿಕ ಅನುದಾನದ ಶೇಕಡ 100 ರಷ್ಟು |

4.7 ಶಾಸಕರ ನಿಧಿಗೆ ನಿಗದಿಯಾದ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಆಯಾ ವರ್ಷ ಬಿಡುಗಡೆ ಮಾಡಲಾಗುವುದು. ಈ ಅನುದಾನವು ಆರ್ಥಿಕ ಇಲಾಖೆಯು ಆಯವ್ಯಯದಲ್ಲಿ ನಿಗದಿಪಡಿಸುವ ಮೊತ್ತಕ್ಕೆ ಅನುಗುಣವಾಗಿ ಆಡಳಿತ/ಸಾಧಿಲ್ವಾರು ವೆಚ್ಚಕ್ಕಾಗಿ ಬಳಸಬಹುದಾಗಿದೆ

(ಎ) ಜಿಲ್ಲಾ ಮಟ್ಟದಲ್ಲಿ-ಈ ಮೊತ್ತವನ್ನು ಗಣಕಯಂತ್ರ ಖರೀದಿಸಲು (ಲ್ಯಾಪ್‌ಟಾಪ್ ಹೊರತುಪಡಿಸಿ) ಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಿಸಲು, ಅಂದಾಜುಪಟ್ಟಿಯನ್ನು ತಯಾರಿಸಲು ಇಂಜನಿಯರ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು, ಮೂರನೇ ಏಜೆನ್ಸಿಯಿಂದ ಮೌಲ್ಯಮಾಪನ ಕಾರ್ಯ ಕೈಗೊಳ್ಳಲು ಹಾಗೂ ಕಚೇರಿಯ ಇತರೆ ವೆಚ್ಚ ಭರಿಸಲು ಉಪಯೋಗಿಸಬಹುದು. ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಬಹುದಾದ ಡಾಟಾ ಎಂಟ್ರಿ ಆಪರೇಟರ್ ಮತ್ತು ಇಂಜನಿಯರ್‌ಗಳ ಸಂಖ್ಯೆ ಈ ಕೆಳಕಂಡಂತಿದೆ:

| ಕ್ಷೇತ್ರಗಳ ಸಂಖ್ಯೆ | ನೇಮಿಸಿಕೊಳ್ಳಬಹುದಾದ ಡಾಟಾ ಎಂಟ್ರಿ ಆಪರೇಟರ್‌ಗಳ ಸಂಖ್ಯೆ | ನೇಮಿಸಿಕೊಳ್ಳಬಹುದಾದ ಇಂಜನಿಯರ್‌ಗಳ ಸಂಖ್ಯೆ |
|---|---|---|
| 5 ಕ್ಷೇತ್ರಗಳವರೆಗೆ | 1 | 1 |
| 5 ಕ್ಕಿಂತ ಹೆಚ್ಚು ಆದರೆ 10 ಕ್ಕಿಂತ ಕಡಿಮೆ | 2 | 1 |
| 10 ಕ್ಕಿಂತ ಹೆಚ್ಚು | 3 | 1 |

(ಬಿ) ರಾಜ್ಯಮಟ್ಟದಲ್ಲಿ – ಈ ಮೊತ್ತವನ್ನು ಗಣಕಯಂತ್ರ ಖರೀದಿ, ಲೇಖನ ಸಾಮಗ್ರಿ ಖರೀದಿ, ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿರುವ ಡಾಟಾ ಎಂಟ್ರಿ ಆಪರೇಟರುಗಳ ಹಾಗೂ ಪ್ರೋಗ್ರಾಮರ್ಸ್‌ಗಳ ಸಂಬಳ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿ/ಸಿಬ್ಬಂದಿಯವರಿಗೆ ತರಬೇತಿ ನೀಡಲು ವಿನಿಯೋಗಿಸಬಹುದು.

5 ಮೇಲ್ವಿಚಾರಣಾ ಏರ್ಪಾಡುಗಳು:

5.1 ಜಿಲ್ಲಾಧಿಕಾರಿಗಳು ಯೋಜನೆಯ ಅಡಿಯಲ್ಲಿ ಕಾರ್ಯಗತಗೊಂಡ ಕಾಮಗಾರಿಗಳ ಪರಿಶೀಲನೆಗಾಗಿ ಏರ್ಪಾಡು ಮಾಡತಕ್ಕದ್ದು. ಅದೇ ರೀತಿ, ಕಾಮಗಾರಿ ಸ್ಥಳಗಳನ್ನು ನಿಯಮಿತವಾಗಿ ಭೇಟಿ ನೀಡುವುದು ಹಾಗೂ ನಿಗದಿಪಡಿಸಲಾದ ಕಾರ್ಯವಿಧಾನಗಳು ಮತ್ತು ನಿರ್ದಿಷ್ಟ ವಿವರಪಟ್ಟಿಗಳ ಅನುಸಾರ ಕಾಮಗಾರಿಗಳು ತೃಪ್ತಿಕರವಾಗಿ ಪ್ರಗತಿಗೊಳ್ಳುತ್ತಿವೆಯೇ ಎಂಬುದನ್ನು ನೋಡಿಕೊಳ್ಳುವುದು ಈ ಕಾಮಗಾರಿಗಳ ಅನುಷ್ಠಾನ ಏಜೆನ್ಸಿಗಳ ಹಿರಿಯ ಅಧಿಕಾರಿಗಳ ಜವಾಬ್ದಾರಿಯಾಗಿರತಕ್ಕದ್ದು. ಅಂತಹ ಪರಿಶೀಲನೆ ಮತ್ತು ಮೇಲ್ವಿಚಾರಣೆಯಲ್ಲಿ ಕಾಮಗಾರಿಯ ಅನುಷ್ಠಾನ ಏಜೆನ್ಸಿಯು ಶಾಸಕರನ್ನು ಸಹ ತೊಡಗಿಸಿಕೊಳ್ಳತಕ್ಕದ್ದು.

5.2 ಜಿಲ್ಲಾಧಿಕಾರಿಗಳು ಪ್ರತಿಯೊಂದು ಮತಕ್ಷೇತ್ರದಲ್ಲಿನ ಯೋಜನೆಯ ವಾಸ್ತವಿಕ ಮತ್ತು ಹಣಕಾಸಿನ ಪ್ರಗತಿಯ ಕುರಿತು ಸಿದ್ಧಪಡಿಸಿದ ಮಾಸಿಕ ಪ್ರಗತಿ ಅನುಷ್ಠಾನ ವರದಿ (MPIC) ಯೋಜನಾ ಇಲಾಖೆಗೆ ಸಲ್ಲಿಸತಕ್ಕದ್ದು

ಹಾಗೂ ಈ ಬಗ್ಗೆ ಶಾಸಕರಿಗೂ ವರದಿ ಮಾಡಬೇಕು. MPIC ನಮೂನೆಯನ್ನು ಅನುಬಂಧ VI ರಲ್ಲಿ ನೀಡಲಾಗಿದೆ.

5.3 ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ನಡೆಯುವ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ ಮಾಸಿಕ ಸಭೆಗಳಲ್ಲಿ ಕರ್ನಾಟಕ ಶಾಸಕರ ಪ್ರದೇಶಾಭಿವೃದ್ಧಿ ಯೋಜನಯ ಅನುಷ್ಠಾನದ ಕುರಿತು ಪರಿಶೀಲನೆ ಕೈಗೊಳ್ಳಲಾಗುತ್ತಿದೆ. ಸರ್ಕಾರಿ ಸುತ್ತೋಲೆ ಸಂಖ್ಯೆ:ಪಿಡಿ 40 ಐಎಂಎಂ 2010, ದಿನಾಂಕ:15.07.2010.

5.4 ಕರ್ನಾಟಕ ಶಾಸಕ ಪ್ರದೇಶಾಭಿವೃದ್ಧಿ ಯೋಜನೆಯ ಉಸ್ತುವಾರಿಗಾಗಿ ಅಂತರ್ಜಾಲದ ಮಾಹಿತಿ ನಿರ್ವಹಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದು, ಈ ವ್ಯವಸ್ಥೆಯಲ್ಲಿ ಮಾಹಿತಿಯನ್ನು ಅಳವಡಿಸಲು ಹೊರಗುತ್ತಿಗೆ ಆಧಾರದಿಂದ ಸಿಬ್ಬಂದಿಯನ್ನು ನೇಮಿಸಿ ಈ ವೆಚ್ಚವನ್ನು ಸಾಧಿಲ್ವಾರು ವೆಚ್ಚಕ್ಕೆಂದು ನೀಡಿರುವ ಹಣದಲ್ಲಿ ಭರಿಸಬಹುದಾಗಿದೆ.

5.5 ಯೋಜನಾ ಇಲಾಖೆಯು ಈ ಯೋಜನೆಗೆ ಸಂಬಂಧಿಸಿದಂತೆ ಮೇಲ್ವಿಚಾರಣಾ ನಮೂನೆಗಳು ಮತ್ತು ಇತರ ವಿಷಯಗಳನ್ನು ಕುರಿತ ವಿವರಗಳನ್ನು ಯೋಜನೆಯ ಚೌಕಟ್ಟಿನೊಳಗೆ ಕಾಲಕಾಲಕ್ಕೆ ನಿರ್ಧರಿಸಬೇಕು.

5.6 ಜಿಲ್ಲಾಧಿಕಾರಿಗಳು ಕಾಮಗಾರಿವಾರು ಮಾಸಿಕ ಪ್ರಗತಿ ವರದಿಯನ್ನು (MPR) ನಿರ್ದೇಶಕರು, ಎಡಿಬಿ ವಿಭಾಗ, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕೊಠಡಿ ಸಂಖ್ಯೆ:743, 7ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಪ್ರತಿ ತಿಂಗಳ 15 ರೊಳಗೆ ತಲುಪುವಂತೆ ತಪ್ಪದೆ ಕಳುಹಿಸಬೇಕು. ಸದರಿ ಮಾಸಿಕ ಪ್ರಗತಿ ವರದಿಯ ಪ್ರತಿಯನ್ನು ಸಂಬಂಧಪಟ್ಟ ಶಾಸಕರಿಗೂ ಸಹ ಪ್ರತಿ ತಿಂಗಳು ಕಳುಹಿಸಬೇಕು.

5.7 ಈ ವೆಬ್ ಆಧಾರಿತ ಮಾಹಿತಿ ನಿರ್ವಹಣೆ ವ್ಯವಸ್ಥೆಯurl ಈ ರೀತಿ ಇದೆ http://worksoft.kar.nic.in. ಈ ವೆಬ್ ಆಧಾರಿತ ಮಾಹಿತಿ ನಿರ್ವಹಣೆ ವ್ಯವಸ್ಥೆಯಲ್ಲಿ ಮಾಹಿತಿಯನ್ನು ಪೂರೈಸುವ ಜವಾಬ್ದಾರಿಯನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಡಾಟಾ ಎಂಟ್ರಿ ಮಾಡಲು ನುರಿತ ಸಿಬ್ಬಂದಿ ಇಲ್ಲದಿರುವುದರಿಂದ ಈ ಕೆಲಸವನ್ನು ಹೊರಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಪ್ರತ್ಯೇಕ ಲೆಕ್ಕಶೀರ್ಷಿಕೆ ಅಡಿ ಅನುದಾನ ಒದಗಿಸಲಾಗಿದೆ. ಆದಾಗ್ಯೂ ಡಾಟಾ ಎಂಟ್ರಿ ಕಾರ್ಯ ನಿರ್ವಹಿಸದಿದ್ದಲ್ಲಿ ಅಥವಾ ವಿಳಂಬ ಮಾಡಿದ್ದಲ್ಲಿ ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ ಲೋಪವೆಸಗಿದ ಸಿಬ್ಬಂದಿಗಳ ಮೇಲೆ ನಿಯಾಮಾನುಸಾರ ಶಿಸ್ತು ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಕ್ರಮ ವಹಿಸಬೇಕು.

5.8 ಮುಖ್ಯ ಕಾರ್ಯದರ್ಶಿಗಳು/ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು/ಯೋಜನಾ ಕಾರ್ಯದರ್ಶಿಗಳು ವರ್ಷದಲ್ಲಿ ಕನಿಷ್ಠ ಒಮ್ಮೆಯಾದರೂ ಈ ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳ ಪ್ರಗತಿಯನ್ನು ನಿರ್ಧರಿಸಲು ಜಿಲ್ಲಾಧಿಕಾರಿಗಳ ಸಭೆಯನ್ನು ನಡೆಸಬೇಕು.

**6 ಟ್ರಸ್ಟ್ ಮತ್ತು ಸೊಸೈಟಿಗಳಿಗೆ ಹಣ ಬಿಡುಗಡೆ:**

**6.1** ಸಮುದಾಯ ಹಾಗೂ ಸಾರ್ವಜನಿಕರ ಉಪಯೋಗಕ್ಕಾಗಿ ಹೆಸರಾಂತ ನೊಂದಾಯಿತ ಸೊಸೈಟಿ/ಟ್ರಸ್ಟ್‌ಗಳು ನಿರ್ಮಿಸುವ ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ಕೈಗೊಳ್ಳಬಹುದು, ಆದರೆ ಸಮಾಜಸೇವೆ/ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಕಾರ್ಯನಿರ್ವಹಿಸಿರಬೇಕು. ಟ್ರಸ್ಟ್/ ಸೊಸೈಟಿಗಳು ನೊಂದಣಿಯಾದ ಮೇಲೆ ಕ್ಷೇಮಾಭಿವೃದ್ಧಿ/ಸಮಾಜ ಸೇವೆ ಚಟುವಟಿಕೆಗಳನ್ನು ಕೈಗೊಳ್ಳದಿದ್ದಲ್ಲಿ ಅಂತಹವುಗಳಿಗೆ ಸಹಾಯಧನ ನೀಡುವಂತಿಲ್ಲ. ಫಲಾನುಭವಿ ಸೊಸೈಟಿ/ಟ್ರಸ್ಟ್ ಉತ್ತಮವಾಗಿ ಕಾರ್ಯನಿರ್ವಹಿಸುವ, ಸಾರ್ವಜನಿಕ ಹಿತಾಸಕ್ತಿಯ, ಲಾಭ ಗಳಿಕೆಯ ಉದ್ದೇಶ ಹೊಂದಿರದ ಹಾಗೂ ಸ್ಥಳೀಯವಾಗಿ ಜನಪ್ರಿಯವಾಗಿರಬೇಕು. ಈ ಎಲ್ಲಾ ಸೊಸೈಟಿ/ಟ್ರಸ್ಟ್‌ಗಳು ಸಮಾಜ ಸೇವೆಯ ಬಗ್ಗೆ ಕ್ಷೇಮಾಭಿವೃದ್ಧಿ ಚಟುವಟಿಕೆ ಕೈಗೊಂಡ ಬಗ್ಗೆ ಹಾಗೂ ಲಾಭ ಗಳಿಕೆಯ ಉದ್ದೇಶ ಹೊಂದಿರದ ಬಗ್ಗೆ ಹಾಗೂ ಅದರ

ಚಟುವಟಿಕೆಗಳಲ್ಲಿ ಪಾರದರ್ಶಕತೆ ಹಾಗೂ ಆರ್ಥಿಕ ಸ್ಥಿರತೆ ಹೊಂದಿದ ಬಗ್ಗೆ ಖಚಿತ ಪಡೆದುಕೊಳ್ಳಬೇಕು. ಈ ಅಂಶಗಳನ್ನು ಖಾತ್ರಿಪಡಿಸುವುದು ಜಿಲ್ಲಾಡಳಿತದ ಹೊಣೆಯಾಗಿರುತ್ತದೆ.

6.2 ಭೂಮಿಯ ಒಡೆತನ ಟ್ರಸ್ಟ್/ಸೊಸೈಟಿಯಾಗಿದ್ದರು ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯಿಂದ ನಿರ್ಮಿಸಿದ ಯಾವುದೇ ಕಟ್ಟಡ/ವಿನ್ಯಾಸವು ರಾಜ್ಯ ಸರ್ಕಾರದ ಆಸ್ತಿಯಾಗುವುದು ಎಂದು ನಮೂದಿಸಲಾಗಿರುವ ಸರ್ಕಾರಿ ಆದೇಶ ಸಂಖ್ಯೆ:ಯೋಇ 40 ಪಿಎಂಎಂ 2005, ದಿನಾಂಕ:15.03.2006 ವನ್ನು ಪರಿಷ್ಕರಿಸಿ ಟ್ರಸ್ಟ್/ಸೊಸೈಟಿಯ ಆಸ್ತಿಗಳ ವೆಚ್ಚದ ಹೆಚ್ಚಿನ ಭಾಗವನ್ನು ಒಂದು ವೇಳೆ ಸದರಿ ಸಂಸ್ಥೆಗಳೇ ಭರಿಸಿದ ಪಕ್ಷದಲ್ಲಿ ಇಡೀ ಆಸ್ತಿಯನ್ನು ಸರ್ಕಾರದ ಆಸ್ತಿಯನ್ನಾಗಿ ನೊಂದಾಯಿಸುವ ಅವಶ್ಯಕತೆ ಇರುವುದಿಲ್ಲ.

6.3 ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯಿಂದ ನಿರ್ಮಿಸಿದ ಆಸ್ತಿಯನ್ನು ನಿಗದಿತ ಉದ್ದೇಶಗಳಿಗೆ ಉಪಯೋಗಿಸದೆ ಇರುವುದು ಕಂಡುಬಂದರೇ ಸದರಿ ಆಸ್ತಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು ಮಾತ್ರವಲ್ಲದೇ ಇದಕ್ಕೆ ವೆಚ್ಚ ಮಾಡಿದ ಹಣವನ್ನು ಶೇಕಡ 18 ರಷ್ಟು ಬಡ್ಡಿಯೊಂದಿಗೆ ಸಂಬಂಧಿಸಿದ ಸೊಸೈಟಿ/ಟ್ರಸ್ಟ್ ನಿಂದ ವಸೂಲಿ ಮಾಡಬೇಕು. ಈ ಬಗ್ಗೆ ಒಂದು ಕರಾರು ಪತ್ರವನ್ನು ಅನುಬಂಧ–VII ರಲ್ಲಿನ ನಿಗದಿತ ನಮೂನೆಯಲ್ಲಿ ಸೊಸೈಟಿ/ಟ್ರಸ್ಟ್ ನಿಂದ ಪೂರ್ವಭಾವಿಯಾಗಿ ಪಡೆಯುವುದು ಮತ್ತು ನೋಂದಾಯಿಸುವುದು.

6.4 ಯಾವುದೇ ಒಂದು ಸೊಸೈಟಿ ಅಥವಾ ಟ್ರಸ್ಟ್‌ನ ಒಂದು ಅಥವಾ ಹೆಚ್ಚಿನ ಕಾಮಗಾರಿಗಳಿಗೆ KLLADS ನಿಧಿಯ ಶೇಕಡ 15 ಕ್ಕಿಂತ ಹೆಚ್ಚಾಗಿ ವೆಚ್ಚ ಮಾಡಬಾರದು. ಯಾವುದೇ ಒಂದು ಸೊಸೈಟಿ ಅಥವಾ ಟ್ರಸ್ಟ್ ತನ್ನ ಜೀವಾವಧಿಯಲ್ಲಿ ಈ ನಿಧಿಯ ಶೇಕಡ 15 ರಷ್ಟು ಹಣ ಪಡೆದಿದ್ದರೆ ಇಂತಹ ಸೊಸೈಟಿ/ ಟ್ರಸ್ಟ್‌ಗಳು ಶಾಸಕರ ನಿಧಿಯನ್ನು ಪುನಃ ಪಡೆಯಲು ಅರ್ಹರಿರುವುದಿಲ್ಲ.

6.5 ಶಿಫಾರಸು ಮಾಡುವ ಶಾಸಕರು ಅಥವಾ ಅವರ ಕುಟುಂಬದ ಸದಸ್ಯರು ಸೊಸೈಟಿ ಅಥವಾ ಟ್ರಸ್ಟ್‌ನ ಅಧ್ಯಕ್ಷರು ಅಥವಾ ವ್ಯವಸ್ಥಾಪಕ ಸಮಿತಿಯ ಸದಸ್ಯ ಅಥವಾ ನೊಂದಾಯಿತ ಸೊಸೈಟಿ/ಟ್ರಸ್ಟ್‌ನ ಟ್ರಸ್ಟಿಯಾಗಿದ್ದರೆ ಅಂತಹ ಸೊಸೈಟಿ/ಟ್ರಸ್ಟ್‌ಗೆ ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಕಾಮಗಾರಿಗಳನ್ನು ಶಿಫಾರಸು ಮಾಡುವುದನ್ನು ನಿಷೇಧಿಸಲಾಗಿದೆ. ಕುಟುಂಬ ಸದಸ್ಯರು ಅಂದರೆ ಸ್ವತ: ಶಾಸಕರು, ಅವರ ಪತ್ನಿ ತಂದೆ ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ, ಅವರ ಮಕ್ಕಳು, ಮೊಮ್ಮಕ್ಕಳು ಅವರ ಪತ್ನಿಯರು ಮತ್ತು ಅತ್ತೆ ಮಾವಂದಿರುಗಳು. ಶಾಸಕರುಗಳಲ್ಲಿ ಪರಸ್ಪರ ಅನುದಾನ ಹಂಚಿಕೆಯಾಗುವುದನ್ನು ತಪ್ಪಿಸಲು **ಒಬ್ಬ ಶಾಸಕರು, ಇನ್ನೊಬ್ಬ ಶಾಸಕರಿಂದ ನಡೆಸಲ್ಪಡುತ್ತಿರುವ ನೊಂದಾಯಿತ ಸೊಸೈಟಿ/ಟ್ರಸ್ಟ್‌ಗಳ ಕಾಮಗಾರಿಗಳಿಗೆ ಶಿಫಾರಸು ಮಾಡಬಾರದು.**

7 **ನಾಮಫಲಕ:**

(ಅ) ಕಾಮಗಾರಿ ಆರಂಭಗೊಳ್ಳುವ ಸಮಯದಲ್ಲಿ ಈ ಕೆಳಕಂಡ ಮಾಹಿತಿಯನ್ನು ಒಳಗೊಂಡ ಒಂದು ತಾತ್ಕಾಲಿಕ ನಾಮಫಲಕವನ್ನು ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಸ್ಥಳದಲ್ಲಿ ಪ್ರದರ್ಶಿಸುವುದು.

**(ಲೋಗೊ)**

| **ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿ ಕೈಗೊಂಡ ಕಾಮಗಾರಿ** | | |
|---|---|---|
| 1 | ಶಾಸಕರ ಹೆಸರು | |
| 2 | ಕ್ಷೇತ್ರದ ಹೆಸರು | |
| 3 | ಕಾಮಗಾರಿಯ ಹೆಸರು | |
| 4 | ಅಂದಾಜು ವೆಚ್ಚ | ರೂ. |
| 5 | ಕಾಮಗಾರಿ ಪೂರ್ಣಗೊಳ್ಳಬಹುದಾದ ದಿನಾಂಕ | |
| 6 | ಅನುಷ್ಠಾನಾಧಿಕಾರಿಯ ಹೆಸರು | |

(ಅ) ಕಾಮಗಾರಿ ಪೂರ್ಣಗೊಂಡ ನಂತರ ಈ ಕೆಳಕಂಡ ಮಾಹಿತಿಯನ್ನು ಒಳಗೊಂಡ ಒಂದು ಖಾಯಂ ನಾಮಫಲಕವನ್ನು ನಿರ್ಮಿಸುವುದು.

(ಲೋಗೊ)

| ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿ ಕೈಗೊಂಡ ಕಾಮಗಾರಿ | | |
|---|---|---|
| 1 | ಶಾಸಕರ ಹೆಸರು | |
| 2 | ಕ್ಷೇತ್ರದ ಹೆಸರು | |
| 3 | ಕಾಮಗಾರಿಯ ಹೆಸರು | |
| 4 | ಅಂದಾಜು ವೆಚ್ಚ | ರೂ. |
| 5 | ಕಾಮಗಾರಿ ಆರಂಭಗೊಂಡ ದಿನಾಂಕ | |
| 6 | ಕಾಮಗಾರಿಯ ವೆಚ್ಚ | ರೂ. |
| 7 | ಅನುಷ್ಠಾನಾಧಿಕಾರಿಯ ಹೆಸರು | |
| 8 | ಕಾಮಗಾರಿ ಪೂರ್ಣಗೊಂಡ ದಿನಾಂಕ | |

8 **ಕಾಮಗಾರಿಗಳ ಬದಲಾವಣೆ:** ಆಡಳಿತಾತ್ಮ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ನೀಡಿದ ನಂತರ ನ್ಯಾಯಾಲಯದಲ್ಲಿ ತಕರಾರು ಇರುವ ಕಾಮಗಾರಿಗಳನ್ನು ಹೊರತುಪಡಿಸಿ ಇನ್ನಿತರ ಯಾವುದೇ ಕಾಮಗಾರಿಗಳನ್ನು ಬದಲಾಯಿಸಬಾರದು. ಸದರಿ ವಿಷಯವನ್ನು ಸಂಬಂಧಪಟ್ಟ ಶಾಸಕರ ಗಮನಕ್ಕೆ ತರುವುದು.

## ಅನುಬಂಧ-III

## ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಕೈಗೊಳ್ಳಬಹುದಾದಂತಹ ಕಾಮಗಾರಿಗಳ ಪಟ್ಟಿ

### 1. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು:

ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಬಹುದಾಗಿದೆ.

1) ಶಾಲಾ ಕೊಠಡಿಗಳ ನಿರ್ಮಾಣ
2) ಕಾಂಪೌಂಡ್ ಗೋಡೆಗಳ ನಿರ್ಮಾಣ
3) ಆಟದ ಮೈದಾನಗಳ ಅಭಿವೃದ್ಧಿ
4) ಮೂಲಭೂತ ಸೌಕರ್ಯಗಳನ್ನೊಳಗೊಂಡ ಸುಸಜ್ಜಿತ ಗ್ರಂಥಾಲಯಗಳ ನಿರ್ಮಾಣ
5) ಸುಸಜ್ಜಿತ ಪ್ರಯೋಗಾಲಯಗಳ ನಿರ್ಮಾಣ
6) ಬಯಲು ರಂಗಮಂದಿರಗಳ ನಿರ್ಮಾಣ
7) ಸೈಕಲ್ ಸ್ಟ್ಯಾಂಡ್‌ಗಳ ನಿರ್ಮಾಣ
8) ಶಾಲೆಗಳ ಹತ್ತಿರ ಶಿಕ್ಷಕರಿಗೆ ವಸತಿ ಗೃಹಗಳ ನಿರ್ಮಾಣ
9) RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
10) ಗಣಕಯಂತ್ರ ಮತ್ತು ಪ್ರಿಂಟರ್ ಇತ್ಯಾದಿಗಳನ್ನು ಒದಗಿಸುವುದು.
11) ಬೋಧನೋಪಕರಣಗಳು ಹಾಗೂ ಆಟೋಪಕರಣಗಳನ್ನು ಒದಗಿಸುವುದು.

### 2. ಉನ್ನತ ಶಿಕ್ಷಣ

ಸರ್ಕಾರಿ ಕಾಲೇಜುಗಳು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಸರ್ಕಾರಿ ಔದ್ಯೋಗಿಕ ಸಂಸ್ಥೆಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಬಹುದು.

1) ತರಗತಿ ಕೊಠಡಿಗಳ ನಿರ್ಮಾಣ
2) ಕಾಂಪೌಂಡ್ ಗೋಡೆಗಳ ನಿರ್ಮಾಣ
3) ಗ್ರಂಥಾಲಯ, ಪ್ರಯೋಗಾಲಯ ಹಾಗೂ ಶೌಚಾಲಯಗಳ ನಿರ್ಮಾಣ
4) ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಿಗೆ ಉಪಕರಣಗಳನ್ನು ಒದಗಿಸುವುದು.
5) RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
6) ಆವರಣದಲ್ಲಿ ರಸ್ತೆ, ಆಟದ ಮೈದಾನ ಮತ್ತು ಉಪಾಹಾರ ಮಂದಿರಗಳಂಥ ಮೂಲಸೌಕರ್ಯಗಳನ್ನು ಒದಗಿಸುವುದು.

### 3. ಕ್ರೀಡೆಗಳು ಮತ್ತು ಯುವಜನ ಸೇವೆಗಳು

1) ಕ್ರೀಡಾಂಗಣಗಳ ನಿರ್ಮಾಣ
2) ಕ್ರೀಡೆಗಳಿಗೆ ಸಂಬಂಧಿಸಿದ ಪರಿಕರಗಳ ಪೂರೈಕೆ
3) ಜಾಗಿಂಗ್ ಟ್ರ್ಯಾಕ್, ಟೆನ್ನಿಸ್ ಕೋರ್ಟ್, ಬಾಸ್ಕೆಟ್ ಬಾಲ್ ಕೋರ್ಟ್ ಮುಂತಾದವುಗಳ ಅಭಿವೃದ್ಧಿ

4. ಆರೋಗ್ಯ
   1) ಪ್ರಾಥಮಿಕ ಆರೋಗ್ಯ ಕೇಂದ್ರ, ಸಮೂದಾಯ ಆರೋಗ್ಯ ಕೇಂದ್ರ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ
   2) ಆಸ್ಪತ್ರೆಗಳಿಗೆ ಕಾಂಪೌಂಡ್ ಗೋಡೆಗಳ ನಿರ್ಮಾಣ
   3) ಆಸ್ಪತ್ರೆಗಳಿಗೆ ಬೇಕಾದ ಪರಿಕರಗಳನ್ನು ಪೂರೈಸುವುದು.
   4) ರಕ್ತ ನಿಧಿಗಳ ಸ್ಥಾಪನೆ
   5) ಆಂಬ್ಯುಲೆನ್ಸ್ ವಾಹನಗಳ ಖರೀದಿ
   6) ಆಸ್ಪತ್ರೆಗಳಲ್ಲಿ ಶೌಚಾಲಯಗಳ ನಿರ್ಮಾಣ
   7) ಆಸ್ಪತ್ರೆಗಳಲ್ಲಿ RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
   8) ವೈದ್ಯಾಧಿಕಾರಿಗಳು ಮತ್ತು ANMಗಳಿಗೆ ವಸತಿಗೃಹಗಳ ನಿರ್ಮಾಣ

5. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ
   1) ಅಂಗವಿಕಲರಿಗೆ ಪರಿಕರಗಳ ಪೂರೈಕೆ
   2) ಅಂಗನವಾಡಿ ಕೇಂದ್ರಗಳ ನಿರ್ಮಾಣ
   3) ಅಂಗನವಾಡಿ ಕೇಂದ್ರಗಳಿಗೆ ಕಾಂಪೌಂಡ್ ಗೋಡೆಗಳ ನಿರ್ಮಾಣ
   4) RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
   5) ಅಂಗನವಾಡಿಗಳಿಗೆ ತಲಾ ರೂ.5,000/- ಗಳ ವರೆಗಿನ ಆಟದ ಉಪಕರಣಗಳ ಪೂರೈಕೆ
   6) ವೃದ್ಧಾಶ್ರಮ, ಅನಾಥಾಶ್ರಮ, ನಿರ್ಗತಿಕರಿಗೆ ವಸತಿ ನಿಲಯ ಇತ್ಯಾದಿಗಳ ನಿರ್ಮಾಣ

6. ಸಮಾಜ ಕಲ್ಯಾಣ/ಹಿಂದುಳಿದ ವರ್ಗ/ಅಲ್ಪಸಂಖ್ಯಾತರು
   1) ಸರ್ಕಾರಿ ಹಾಸ್ಟೆಲ್‌ಗಳ ನಿರ್ಮಾಣ
   2) ಹಾಸ್ಟೆಲ್‌ಗಳಿಗೆ ಕಾಂಪೌಂಡ್ ಗೋಡೆಗಳ ನಿರ್ಮಾಣ
   3) ಮೆಟ್ರಿಕ್ ನಂತರದ ವಿದ್ಯಾರ್ಥಿ/ವಿಧ್ಯಾರ್ಥಿನಿಯರ ಹಾಸ್ಟೆಲ್‌ನ ಗ್ರಂಥಾಲಯಕ್ಕೆ ಪುಸ್ತಕಗಳು ಮತ್ತು ಉಪಕರಣಗಳ ಪೂರೈಕೆ.
   4) ಹಾಸ್ಟೆಲ್‌ಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.
   5) ಹಾಸ್ಟೆಲ್‌ಗಳಲ್ಲಿ ಶೌಚಾಲಯಗಳ ನಿರ್ಮಾಣ

7. ಪಶುಸಂಗೋಪನೆ
   1) ಪಶುವೈದ್ಯಕೀಯ ಆಸ್ಪತ್ರೆ, ಪಶುವೈದ್ಯಕೀಯ ಔಷಧಾಲಯ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ನಿರ್ಮಾಣ
   2) ಪಶುವೈದ್ಯಕೀಯ ಆಸ್ಪತ್ರೆ, ಪಶುವೈದ್ಯಕೀಯ ಔಷಧಾಲಯ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ ಕಾಂಪೌಂಡ್ ಗೋಡೆಗಳ ನಿರ್ಮಾಣ
   3) ಹಳ್ಳಿಗಳಲ್ಲಿ ಪಶು ಸಂತತಿ ಅಭಿವೃದ್ಧಿ ಕೇಂದ್ರಗಳಿಂದ ಮುಖ್ಯರಸ್ತೆಗೆ ಸೇರುವ ರಸ್ತೆ ನಿರ್ಮಾಣ
   4) ಪಶು ವೈದ್ಯಕೀಯ ಆಸ್ಪತ್ರೆಯ ಸಿಬ್ಬಂದಿಗಳಿಗೆ ವಸತಿಗೃಹಗಳ ನಿರ್ಮಾಣ
   5) ಕೃತಕ ಗರ್ಭಧಾರಣಾ ಕೇಂದ್ರಗಳ ಕಟ್ಟಡ ನಿರ್ಮಾಣ

8. ತೋಟಗಾರಿಕೆ
   1) ನಗರ ಪ್ರದೇಶಗಳಲ್ಲಿ ಉದ್ಯಾನವನಗಳ ಅಭಿವೃದ್ಧಿ
   2) ಮಾರುಕಟ್ಟೆ ಆವರಣಗಳಲ್ಲಿ ಗೋದಾಮುಗಳ ನಿರ್ಮಾಣ

9. ವಸತಿ
   1) ಪೊಲೀಸ್ ಇಲಾಖೆಗೆ ಗರುಡ/ಹೊಯ್ಸಳ ಮಾದರಿಯ ವಾಹನಗಳನ್ನು ಒದಗಿಸುವುದು (ಚಾಲಕ ಮತ್ತ ನಿರ್ವಹಣೆ ವೆಚ್ಚ ಹೊರತುಪಡಿಸಿ)

**10. ಮೂಲಭೂತ ಸೌಕರ್ಯ ಅಭಿವೃದ್ಧಿಗಳು**

1) ರಸ್ತೆ ಸಂಪರ್ಕ: ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಎಲ್ಲಾ ಹವಾಮಾನಕ್ಕೆ ಹೊಂದಿಕೊಳ್ಳುವಂತಹ ರಸ್ತೆಗಳು
2) ತಾಲ್ಲೂಕು ಮಟ್ಟದಲ್ಲಿ ಸಾರ್ವಜನಿಕ ವಿದ್ಯುತ್ ಚಿತಾಗಾರ ಮತ್ತು ಸ್ಮಶಾನಗಳಿಗೆ ಭೂಮಿ ಒದಗಿಸುವುದು.
3) ಕಾಲು ಸೇತುವೆಗಳ ನಿರ್ಮಾಣ
4) ಬಸ್ ತಂಗುದಾಣಗಳ ನಿರ್ಮಾಣ
5) ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ:
   ಘನ ತ್ಯಾಜ್ಯ ವಸ್ತುಗಳ ನಿರ್ವಹಣಾ ಕೇಂದ್ರಗಳ ವಿಕೇಂದ್ರೀಕರಣ

**11. ಕೊಳಚೆ ಪ್ರದೇಶಗಳಿಗೆ ಒದಗಿಸಬಹುದಾದ ಸೌಲಭ್ಯಗಳು**

1) ಕೊಳಚೆ ಪ್ರದೇಶಗಳ ಕುಶಲಕರ್ಮಿಗಳಿಗೆ ಸಾಮಾನ್ಯ ಶೆಡ್ ಒದಗಿಸುವುದು.
2) ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಗುಂಪು ವಸತಿ ಯೋಜನೆ ಅಡಿ ನಿರ್ಮಿಸಲಾದ ವಸತಿ ಪ್ರದೇಶಗಳಲ್ಲಿ ಮೂಲ ಸೌಕರ್ಯ ಒದಗಿಸುವುದು.

**12. ಹಳ್ಳಿಗಳಲ್ಲಿ RO ಮಾದರಿಯ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.**

**13. ಪ್ರವಾಸೋದ್ಯಮ**

1) ಪ್ರವಾಸಿ ಸ್ಥಳಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸುವುದು.
2) ಐತಿಹಾಸಿಕ ಮತ್ತು ಪಾರಂಪರಿಕ ಸ್ಥಳಗಳ ಸೌಂದರ್ಯ ರಕ್ಷಣೆಗೆ ಸಂಬಂಧಿಸಿದ ಕಾಮಗಾರಿಗಳು

**14. ಸಮುದಾಯ ಭವನಗಳ ನಿರ್ಮಾಣ**

**15. ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣ ಮತ್ತು ಸಂಚಾರಿ ಗ್ರಂಥಾಲಯಗಳನ್ನು ಒದಗಿಸುವುದು.**

ಕಾಮಗಾರಿಗಳನ್ನು ಸರ್ಕಾರಿ ಏಜೆನ್ಸಿಗಳಾದ ಲೋಕೋಪಯೋಗಿ, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದಂಥ ಕೆಆರ್ಐಡಿಎಲ್ ಮತ್ತು ನಿರ್ಮಿತಿ ಕೇಂದ್ರಗಳ ಮೂಲಕ ಅನುಷ್ಠಾನಗೊಳಿಸುವುದು.

| ಅನುಬಂಧ -1 | |
|---|---|
| ಇಲಾಖಾವಾರು ಆಯವ್ಯಯದ ಲೆಕ್ಕ ಶೀರ್ಷಿಕೆ ವಿವರ | |
| ಇಲಾಖೆ | ಲೆಕ್ಕ ಶೀರ್ಷಿಕೆಗಳ ಸಂಖ್ಯೆ |
| ಕೃಷಿ | 51 |
| ತೋಟಗಾರಿಕೆ | 27 |
| ರೇಷ್ಮೇ | 12 |
| ಪಶು ಸಂಗೋಪನೆ | 28 |
| ಮೀನುಗಾರಿಕೆ | 23 |
| ಆರ್ಥಿಕ | 62 |
| ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 63 |
| ಕೆ ಎಸ್ ಬಿ ಪಿ ಇ | 2 |
| ಇ -ಆಡಳಿತ | 7 |
| ಒಳಾಡಳಿತ | 56 |
| ಸಾರಿಗೆ | 33 |
| ಮೂಲಭೂತ ಸೌಲಭ್ಯ | 16 |
| ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ | 65 |
| ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ | 61 |
| ಸಹಕಾರ | 26 |
| ಪರಿಶಿಷ್ಟ ವರ್ಗಗಳ ಕಲ್ಯಾಣ | 52 |
| ಪರಿಶಿಷ್ಟ ಪಂಗಡ ಕಲ್ಯಾಣ | 35 |
| ಹಿಂದುಳಿದ ವರ್ಗಗಳ ಕಲ್ಯಾಣ | 39 |
| ಅಲ್ಪಸಂಖ್ಯಾತರ ಕಲ್ಯಾಣ | 29 |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 80 |
| ವಾರ್ತಾ ಮತ್ತು ಪ್ರಚಾರ | 15 |
| ಪ್ರವಾಸೋದ್ಯಮ | 16 |
| ಯುಮಸಬಲೀಕರಣ ಮತ್ತು ಕ್ರೀಡೆ | 14 |
| ಆಹಾರ ಮತ್ತು ನಾಗರೀಕ ಸರಬರಾಜು | 20 |
| ಸಂಸದೀಯ ವ್ಯವಹಾರಗಳು | 33 |
| ಕಂದಾಯ | 114 |
| ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 15 |
| ವಸತಿ | 16 |
| ಉನ್ನತ ಶಿಕ್ಷಣ | 63 |
| ಶಾಲಾ ಶಿಕ್ಷಣ ಮತ್ತು ಸಾಕ್ಷರತಾ | 56 |
| ಕೈಮಗ್ಗ ಮತ್ತು ಜವಳಿ | 9 |
| ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು | 13 |
| ಸಣ್ಣ ಪ್ರಮಾಣದ ಕೈಗಾರಿಕೆಗಳು | 15 |
| ಗಣಿ ಮತ್ತು ಭೂ ವಿಜ್ಞಾನ | 5 |
| ನಗರಾಭಿವೃದ್ಧಿ | 256 |
| ಲೋಕೋಪಯೋಗಿ | 58 |

## ಇಲಾಖಾವಾರು ಆಯವ್ಯಯದ ಲೆಕ್ಕ ಶೀರ್ಷಿಕೆ ವಿವರ

| ಇಲಾಖೆ | ಲೆಕ್ಕ ಶೀರ್ಷಿಕೆಗಳ ಸಂಖ್ಯೆ |
| --- | --- |
| ಬಾರೀ ಮತ್ತು ಮಧ್ಯಮ ನೀರಾವರಿ | 46 |
| ಸಣ್ಣ ನೀರಾವರಿ | 37 |
| ವೈದ್ಯಕೀಯ ಶಿಕ್ಷಣ | 65 |
| ಆರೋಗ್ಯ ಮತು ಕುಟುಂಬ ಕಲ್ಯಾಣ | 77 |
| ಕಾರ್ಮಿಕ | 14 |
| ಕೌಶಲ್ಯಾಭಿವೃದ್ದಿ | 37 |
| ಇಂಧನ | 7 |
| ಕನ್ನಡ ಮತ್ತು ಸಂಸ್ಕೃತಿ | 33 |
| ಯೋಜನೆ ಮತ್ತು ಸಾಂಖ್ಯಿಕ | 30 |
| ಕಾನೂನು | 25 |
| ಒಟ್ಟು | 1856 |
| | |

ಅನುಬಂಧ-2

ಲೆಕ್ಕಶೀರ್ಷಿಕೆಗಳ ಸಮೀಕರಣಕ್ಕೆ ವಿವಿಧ ಇಲಾಖೆಯಡಿಯಲ್ಲಿ ಪ್ರಸ್ತಾಪಿಸಿರುವ ಘೋಷ್ವಾರೆ

| ಇಲಾಖೆ | ಸಮೀಕರಣಕ್ಕೆ ಪ್ರಸ್ತಾಪಿಸಲಾದ ಲೆಕ್ಕಶೀರ್ಷಿಕೆಗಳ ಸಂಖ್ಯೆ |
|---|---|
| 1 | 2 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 4 |
| ವೈದ್ಯಕೀಯ ಶಿಕ್ಷಣ | 2 |
| ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | 13 |
| ಉನ್ನತ ಶಿಕ್ಷಣ ಇಲಾಖೆ | 0 |
| ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ | 1 |
| ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ | 2 |
| ಸಮಾಜ ಕಲ್ಯಾಣ (ಪರಿಶಿಷ್ಟ ಜಾತಿ) | 4 |
| ಸಮಾಜ ಕಲ್ಯಾಣ (ಪರಿಶಿಷ್ಟ ಪಂಗಡ) | 2 |
| ಹಿಂದುಳಿದ ವರ್ಗಗಳ ಕಲ್ಯಾಣ | 0 |
| ಅಲ್ಪಸಂಖ್ಯಾತರ ಕಲ್ಯಾಣ | 0 |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 6 |
| ಲೋಕೋಪಯೋಗಿ ಇಲಾಖೆ | 17 |
| ಸಾರಿಗೆ ಇಲಾಖೆ | 13 |
| ತೋಟಗಾರಿಕೆ | 11 |
| ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 10 |
| ಮೀನುಗಾರಿಕೆ | 9 |
| ಪಶುಸಂಗೋಪನೆ | 4 |
| ಒಳಾಡಳಿತ ಇಲಾಖೆ | 4 |
| ಸಹಕಾರ | 3 |
| ಗ್ರಾಮೀಣಾ ಮತ್ತು ಪಂಚಾಯತ್ ರಾಜ್ ಇಲಾಖೆ | 2 |
| ಪ್ರವಾಸೋದ್ಯಮ | 1 |
| ವಾಣಿಜ್ಯ ಮತ್ತು ಕೈಗಾರಿಕೆ (ಎಂ.ಎಸ್. ಎಂ.ಇ) | 1 |
| ಕೈಮಗ್ಗ ಮತ್ತು ಜವಳಿ (ವಾಣಿಜ್ಯ ಮತ್ತು ಕೈಗಾರಿಕೆ) | 1 |
| ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 0 |
| ಒಟ್ಟು | 110 |